# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **418 (553)**
ಉತ್ತರಿಸಬೇಕಾದ ದಿನಾಂಕ : 14.08.2025
ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವ್ಯಾಪ್ತಿಗೆ ಒಳಪಡುವ ಯೋಜನೆಗಳಾವುವು; (ಪೂರ್ಣ ಮಾಹಿತಿ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವ್ಯಾಪ್ತಿಗೆ ಒಳಪಡುವ ಯೋಜನೆಗಳ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ; ಮತ್ತು ಅವುಗಳಿಗೆ ಮಾಡಿದ ವೆಚ್ಚವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡಲಾದ ಯೋಜನೆಗಳ ವಿವರ ಮತ್ತು ವೆಚ್ಚಗಳ ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಇ) | ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಸರ್ಕಾರದಿಂದ ಕ್ರೀಡಾಂಗಣ ನಿರ್ಮಿಸಲಾಗಿದೆಯೇ; ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣವಾದ ಮಾಹಿತಿ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 29 ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳನ್ನು ಮತ್ತು 126 ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. (ವಿವರವನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ).<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-394ನ್ನು ಅನುಷ್ಠಾನಗೊಳಿಸುವ ಸಂಬಂಧ ನಿವೇಶನ ಲಭ್ಯವಿರುವ 12 ತಾಲ್ಲೂಕು ಕೇಂದ್ರಗಳಿಗೆ ತಲಾ 2 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲು ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ-ಇಪಿಇ/123/2025; ದಿನಾಂಕ:15.05.2025ರನ್ವಯ ಅನುಮೋದನೆ ನೀಡಲಾಗಿದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-393ರ ಘೋಷಣೆಯಂತೆ ಆದಿನಾರಾಯಣ ಹೊಸಹಳ್ಳಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕ್ರೀಡಾಂಗಣವನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ರೂ.2.00ಕೋಟಿ ಹಂಚಿಕೆ ಮಾಡಲಾಗಿದೆ. ಸದರಿ ಜಿಲ್ಲಾ ಕ್ರೀಡಾಂಗಣದ ನಿವೇಶನದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರಮ್ ಅನ್ನು ರೂ.5.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಸಹ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಸಾಲಿನಲ್ಲಿ ರೂ.1.50 ಕೋಟಿ ಹಂಚಿಕೆ ಮಾಡಲಾಗಿದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-395ರಲ್ಲಿ ಘೋಷಿಸಿರುವಂತೆ 'ಯಲಬುರ್ಗಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ತಾಲ್ಲೂಕು ಕ್ರೀಡಾಂಗಣ ಹಾಗೂ ಟಿ.ನರಸೀಪುರ ತಾಲ್ಲೂಕು ಕ್ರೀಡಾಂಗಣವನ್ನು 6.00 ಕೋಟಿ ರೂ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ.<br><br>ಬೆಳಗಾವಿ ಜಿಲ್ಲೆಯ ಬೆಳಗಾವಿ ನಗರದಲ್ಲಿ ನೂತನ ಜಿಲ್ಲಾ ಕ್ರೀಡಾಂಗಣವನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ಲೆಕ್ಕಶೀರ್ಷಿಕೆ:4059-80-051-0-29-386 ಇಲಾಖಾ ಕಟ್ಟಡಗಳು ಅಡಿಯಲ್ಲಿ ರೂ.10.00 ಕೋಟಿಗಳ ಅನುದಾನದಿಂದ ನೆಲಸಮತಟ್ಟು ಮಾಡುವುದು, ಕ್ರೀಡಾಂಗಣದ ಮಧ್ಯದಲ್ಲಿರುವ ನಾಲಾಕ್ಕೆ ಆರ್.ಸಿ.ಸಿ ಚರಂಡಿ ನಿರ್ಮಾಣ ಮಾಡುವುದು, ಕ್ರೀಡಾಂಗಣದ ಬದಿಯಲ್ಲಿ ರಿಟೇನಿಂಗ್ ವಾಲ್ ನಿರ್ಮಿಸುವ ಕಾಮಗಾರಿಯನ್ನು ಹಾಗೂ ಕ್ರೀಡಾಂಗಣದ ಮಧ್ಯಭಾಗದಲ್ಲಿದ್ದ ದೇವಸ್ಥಾನವನ್ನು ಸ್ಥಳಾಂತರಿಸಿ, ಮರು ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ. |

| | | |
|---|---|---|
| ಈ) | ಹಲವಾರು ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಅಭ್ಯಾಸಕ್ಕಾಗಿ ಕ್ರೀಡಾಂಗಣ ಇಲ್ಲದೇ ಇರುವುದರಿಂದ ತೊಂದರೆಯಾಗುತ್ತಿದ್ದು, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿದೆಯೇ; ನಡೆಸಿದ್ದಲ್ಲಿ, ಈ ತೊಡಕನ್ನು ಯಾವ ಕಾಲಮಿತಿಯೊಳಗೆ ನಿವಾರಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡಾಂಗಣಗಳಿಲ್ಲದಿರುವ ಜಿಲ್ಲಾ /ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಆದ್ಯತೆ ನೀಡಲಾಗುತ್ತಿದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-403ರಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಸಂಯೋಜಿಸಿ, 100 ಶಾಲೆಗಳಲ್ಲಿ ಆಟದ ಮೈದಾನ ನಿರ್ಮಿಸಲು ರೂ.5.00 ಲಕ್ಷಗಳವರೆಗೆ ನೆರವು ನೀಡಲಾಗುವುದು ಎಂದು ಘೋಷಿಸಲಾಗಿದೆ.<br><br>ಸದರಿ ಯೋಜನೆಯಡಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ 100 ಸರ್ಕಾರಿ ಶಾಲೆಗಳಲ್ಲಿ ಕ್ರೀಡಾ ಅಂಕಣಗಳನ್ನು ನಿರ್ಮಿಸುವುದು ಹಾಗೂ ಈ ರೀತಿ ಕ್ರೀಡಾ ಅಂಕಣಗಳನ್ನು ನಿರ್ಮಿಸಿದ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಒದಗಿಸಲು ಉದ್ದೇಶಿಸಲಾಗಿದೆ.<br><br>ಸದರಿ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. |
| ಉ) | ಕ್ರೀಡಾ ಸಂಘ ಸಂಸ್ಥೆಗಳಿಗೆ, ಸ್ಪೋರ್ಟ್ಸ್ ಕ್ಲಬ್ ಗಳಿಗೆ ಸರ್ಕಾರದಿಂದ ಕಿಟ್‌ಗಳನ್ನು ಹಾಗೂ ಪ್ರೋತ್ಸಾಹಧನ ನೀಡಿದೆಯೇ; ನೀಡಿದ್ದಲ್ಲಿ, ಕಳೆದ 5 ವರ್ಷಗಳಲ್ಲಿ ಯಾವ ಯಾವ ಸಂಘ ಸಂಸ್ಥೆಗಳಿಗೆ ಮತ್ತು ಕ್ಲಬ್‌ಗಳಿಗೆ ಕಿಟ್‌ಗಳನ್ನು ಹಾಗೂ ಪ್ರೋತ್ಸಾಹಧನ ನೀಡಲಾಗಿದೆ? (ತಾಲ್ಲೂಕುವಾರು ಫಲಾನುಭವಿವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಹೌದು.<br>2023-24ನೇ ಸಾಲಿನಲ್ಲಿ ಯುವ ಚೈತನ್ಯ ಯೋಜನೆಯಡಿ ರಾಜ್ಯದ ಆಯ್ದ 200 ಯುವ ಸಂಘಗಳಿಗೆ ಕ್ರೀಡಾ ಕಿಟ್ ವಿತರಿಸಿರುವ ವಿವರ **ಅನುಬಂಧ-4ರಲ್ಲಿ** ಒದಗಿಸಿದೆ.<br><br>2020-21 ರಿಂದ 2024-25ನೇ ಸಾಲಿನಲ್ಲಿ ಕಳೆದ 5 ವರ್ಷಗಳಲ್ಲಿ ಸಂಘ ಸಂಸ್ಥೆಗಳಿಗೆ ಮತ್ತು ಕ್ಲಬ್‌ಗಳಿಗೆ ಕಿಟ್‌ಗಳನ್ನು ನೀಡಿರುವ ತಾಲ್ಲೂಕುವಾರು ಫಲಾನುಭವಿವಾರು ವಿವರ **ಅನುಬಂಧ-5ರಲ್ಲಿ** ಒದಗಿಸಿದೆ. |

**ವೈಎಸ್‌ಡಿ-ಇಬಿಬಿ/97/2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

## ಅನುಬಂಧ-1

### ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಮುಖ ಕಾರ್ಯಕ್ರಮಗಳ ವಿವರ:

1. **ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

ರೂ.ಲಕ್ಷಗಳಲ್ಲಿ

| ಕ್ರ.ಸ | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ಸ್ | 600.00 | 400.00 | 300.00 |
| 2 | ಏಷಿಯನ್ ಗೇಮ್ಸ್ | 35.00 | 25.00 | 15.00 |
| 3 | ಕಾಮನ್ ವೆಲ್ತ್ ಗೇಮ್ಸ್ | 35.00 | 25.00 | 15.00 |
| 4 | ವಿಶ್ವ ಕಪ್/ಚಾಂಪಿಯನ್ ಶಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್ ಶಿಪ್ (ಒಲಂಪಿಕ್ ಕ್ರೀಡೆಗಳಿಗೆ) | 2.00 | 1.00 | 0.50 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.50 | 0.25 | 0.15 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.25 | 0.15 | 0.10 |

2. **ಏಕಲವ್ಯ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಪ್ರತಿ ವರ್ಷ ಏಕಲವ್ಯ ಪ್ರಶಸ್ತಿ ನೀಡಲಾಗುತ್ತಿದೆ.

3. **ಜೀವಮಾನ ಸಾಧನೆ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

4. **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:** ಗ್ರಾಮೀಣ ಕ್ರೀಡೆಗಳಲ್ಲಿನ ಸಾಧಕರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯನ್ನು ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರತಿ ವರ್ಷ ನೀಡಿ ಗೌರವಿಸಲಾಗುವುದು.

5. **ಕ್ರೀಡಾ ಪೋಷಕ ಪ್ರಶಸ್ತಿ:** ಕ್ರೀಡೆಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಲು ಕ್ರೀಡಾ ಪೋಷಕ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

6. **ಗುರಿ ಒಲಂಪಿಕ್ ಪದಕ 2028:** 60 ಯುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ. ಅವರಿಗೆ ಉತ್ತೇಜನ ನೀಡಲು ಗುರಿ ಒಲಂಪಿಕ್ ಯೋಜನೆಯನ್ನು ರೂಪಿಸಲಾಗಿದೆ. 2028ರ ಲಾಸ್ ಏಂಜಲೀಸ್. ಯು.ಎಸ್.ಎ ನಲ್ಲಿ ನಡೆಯುವ ಕ್ರೀಡಾಕೂಟದಲ್ಲಿ ರಾಷ್ಟ್ರಕ್ಕೆ ಕೀರ್ತಿ ತರಲು ಸಹಾಯಕವಾಗುವಂತೆ ಅವರ ಕ್ರೀಡಾ ತರಬೇತಿಗಾಗಿ ವಾರ್ಷಿಕ ತಲಾ ರೂ. 10.00 ಲಕ್ಷಗಳನ್ನು ನೀಡಲಾಗುವುದು.

7. **ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ವಾರ್ಷಿಕ ಗರಿಷ್ಟ ರೂ 50,000/- ವರೆಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡಲಾಗುತ್ತಿದೆ.

8. **ಕ್ರೀಡಾ ವಿದ್ಯಾರ್ಥಿ ವೇತನ:** ರಾಜ್ಯ ಮಟ್ಟದ ಪದಕ ವಿಜೇತರಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ 10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ

9. **ಯುವ ಶಕ್ತಿ ಕೇಂದ್ರ:** ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಕ್ರೀಡೆಗಳಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸಲು ಇಲಾಖೆಯ ಕ್ರೀಡಾಂಗಣಗಳು, ಕ್ರೀಡಾ ಶಾಲೆ/ವಸತಿ ನಿಲಯ, ಸರ್ಕಾರಿ ಕಾಲೇಜುಗಳು ಮತ್ತು ಪೋಲೀಸ್ ತರಬೇತಿ ಶಾಲೆ ಗಳಿಗೆ ರೂ. 15.00 ಲಕ್ಷ ವೆಚ್ಚದಲ್ಲಿ ಜಿಮ್ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುವುದು.

10. **ಯುವ ಚೈತನ್ಯ:** ಗ್ರಾಮದಲ್ಲಿ ಯುವಜನರನ್ನು ಕ್ರೀಡಾ ಚಟುವಟುಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಘಟಕ ವೆಚ್ಚ ರೂ. 40,000/- ದಂತೆ ರಾಜ್ಯದ ಆಯ್ದ ಯುವ ಸಂಘಗಳಿಗೆ ಅಗತ್ಯ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ.

11. **ನಮ್ಮೂರ ಶಾಲೆಗೆ ನಮ್ಮ ಯುವಜನರು:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಾನ್ಯತೆ ಪಡೆದಿರುವ ಕ್ರೀಡಾ ಸಂಸ್ಥೆಗಳು ಆಯೋಜಿಸುವ ತಾಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳನ್ನು ಹೊಂದಿರುವ ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಶಾಲೆಯನ್ನು ಗುರುತಿಸಿ ಆಯ್ಕೆಯಾದ ಶಾಲೆಗೆ ಪ್ರೋತ್ಸಾಹವಾಗಿ ತಲಾ ರೂ: 1.00 ಲಕ್ಷದಂತೆ ಸರ್ಕಾರದಿಂದ ಪ್ರೋತ್ಸಾಹಧನವನ್ನು ನೀಡಲಾಗುವುದು. ಈ ಅನುದಾನದಲ್ಲಿ ರೂ: 10,000/- ಗಳನ್ನು ಆಯ್ಕೆಯಾದ ಶಾಲೆಯ ದೈಹಿಕ ಶಿಕ್ಷಕರಿಗೆ ಮತ್ತು ರೂ: 90,000/-ಗಳನ್ನು ಶಾಲೆಯ ಎಸ್.ಡಿ.ಎಂ.ಸಿ. ಗೆ ಅಗತ್ಯ ಕ್ರೀಡಾ ಸಾಮಾಗ್ರಿಗಳ ಖರೀದಿಗೆ ನೀಡಲಾಗುವುದು.

12. **ಯುವ ಸ್ಪಂದನ:** ಯುವಜನರ ಮಾನಸಿಕ ಆರೋಗ್ಯ ಸಂಬಂಧಿತ ವಿಷಯಗಳ ಕುರಿತು ಜಾಗೃತಿ ಕಾರ್ಯಕ್ರಮಗಳು ಹಾಗೂ ಆಪ್ತ ಸಮಾಲೋಚನಾ ಸೌಲಭ್ಯವನ್ನು ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಯುವ ಸ್ಪಂದನ ಕಾರ್ಯಕ್ರಮದ ಮೂಲಕ ಒದಗಿಸಲಾಗುತ್ತಿದೆ.

13. **ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ:** ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ 5.00 ಲಕ್ಷ ಮತ್ತು ರೂ. 3.00 ಲಕ್ಷ ಹಾಗೂ ರಾಜ್ಯ ಮಟ್ಟದ ಹಿರಿಯರ ಕ್ರೀಡಾಕೂಟದ ಪದಕ ವಿಜೇತರಿಗೆ ರೂ. 0.50 ಲಕ್ಷ ಮತ್ತು ರಾಜ್ಯ ಮಟ್ಟದ ಕಿರಿಯರ ಕ್ರೀಡಾಕೂಟದ ಪದಕ ವಿಜೇತರಿಗೆ ರೂ. 0.25 ಲಕ್ಷ ನಗದು ಪುರಸ್ಕಾರ ನೀಡಲಾಗುತ್ತಿದೆ.

14. **ಕ್ರೀಡಾ ವಸತಿ ಶಾಲೆ/ನಿಲಯ:** ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.

15. **ಗರಡಿ ಮನೆ ನಿರ್ಮಾಣ:** ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣಕ್ಕೆ ತಲಾ ರೂ 10.00 ಲಕ್ಷ ಒದಗಿಸಲಾಗುತ್ತಿದೆ.

16.**<u>ಯುವ ಶಕ್ತಿ ಕೇಂದ್ರ:</u>** ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಇಲಾಖಾ ಕ್ರೀಡಾಂಗಣಗಳು, ಕ್ರೀಡಾ ವಸತಿ ನಿಲಯಗಳು ಮತ್ತು ಸರ್ಕಾರಿ ಕಾಲೇಜುಗಳಿಗೆ ಜಿಮ್ ಉಪಕರಣಗಳನ್ನು ಒದಗಿಸಲಾಗುವುದು.

17. **<u>ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಅನುದಾನ:</u>** ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾಕೂಟಗಳ ಆಯೋಜನೆ, ತರಬೇತಿ ಶಿಬಿರಗಳ ಆಯೋಜನೆ ಹಾಗೂ ಕ್ರೀಡಾಕೂಟಗಳಿಗೆ ರಾಜ್ಯತಂಡದ ನಿಯೋಜನೆಗೆ ಅನುದಾನ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 22 ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಒಟ್ಟು ರೂ 10.00 ಕೋಟಿ ವಿಶೇಷ ಅನುದಾನ ಮಂಜೂರು ಮಾಡಲಾಗಿದ್ದು, ಈಗಾಗಲೇ ರೂ 5.00 ಕೋಟಿ ಬಿಡುಗಡೆ ಮಾಡಲಾಗಿದೆ.

18. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಮೂಲಕ ಯುವಜನರಿಗೆ ಸಾಹಸ ಕ್ರೀಡಾ ಪ್ರಶಿಕ್ಷಕರಾಗಲು ವಿವಿಧ ಹಂತಗಳ ತರಬೇತಿಯನ್ನು ನೀಡಲಾಗುತ್ತಿದೆ.

19.ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಜೀವನ ಕೌಶಲ್ಯ ತರಬೇತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

20. **<u>ಕ್ರೀಡಾ ಮೂಲ ಸೌಕರ್ಯಗಳ ಸೃಜನೆ:</u>** ಜಿಲ್ಲಾ /ತಾಲ್ಲೂಕು ಹೊರಾಂಗಣ, ಒಳಾಂಗಣ ಕ್ರೀಡಾಂಗಣಗಳು, ಈಜುಕೊಳಗಳು, ವಿವಿಧ ಕ್ರೀಡಾ ಅಂಕಣಗಳು, ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಸಿಂಥೆಟಿಕ್ ಹಾಕಿ ಟರ್ಫ್ ಮತ್ತು ಫುಟ್‌ಬಾಲ್ ಹಾಕಿ ಟರ್ಫ್ ಗಳನ್ನು ನಿರ್ಮಿಸಲಾಗುತ್ತಿದೆ.

21. **<u>ಕ್ರೀಡಾಕೂಟಗಳ ಆಯೋಜನೆ:</u>** ದಸರಾ ಕ್ರೀಡಾಕೂಟ, ಮಿನಿ ಒಲಂಪಿಕ್ಸ್, ಮತ್ತಿತರ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ.

# ಅನುಬಂಧ-2

## ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡಲಾದ ಯೋಜನೆಗಳ ವಿವರ ಮತ್ತು ವೆಚ್ಚಗಳ ವಿವರ.

## ಕಳೆದ ಮೂರು ವರ್ಷಗಳ ಯೋಜನೆ ಹಾಗೂ ಅನುದಾನದ ವಿವರ.

| ವರ್ಷ/ಯೋಜನೆಗಳು | ಒಟ್ಟು ಅನುದಾನ | ಚಿಕ್ಕಮಗಳೂರು | ಕಡೂರು | ಕೊಪ್ಪ | ಮೂಡಿಗೆರೆ | ನ.ರಾ.ಪುರ | ಶೃಂಗೇರಿ | ತರೀಕೆರೆ | ಅಜ್ಜಂಪುರ |
|---|---|---|---|---|---|---|---|---|---|
| **2022-23**<br>ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ, ಯುವಜನೋತ್ಸವ ಕಾರ್ಯಕ್ರಮ, ಅಂಗವಿಕಲ ಕ್ರೀಡಾಕೂಟ, ಯುವತರಬೇತಿ ಮತ್ತು ಕಾರ್ಯಾಗಾರ, ಸಾಹಸ ಕ್ರೀಡೆ ಮತ್ತು ಚಾರಣ ಶಿಬಿರ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ, ಯುವ ಸಪ್ತಾಹ ಕಾರ್ಯಕ್ರಮ ವೆಚ್ಚ ಭರಿಸಲಾಗಿದೆ. | 120.05 | 7.50 | 7.50 | 7.50 | 7.50 | 7.50 | 7.50 | 7.50 | 5.50 |
| **2023-24**<br>ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ, ಯುವಜನೋತ್ಸವ ಕಾರ್ಯಕ್ರಮ, ಅಂಗವಿಕಲ ಕ್ರೀಡಾಕೂಟ, ಯುವತರಬೇತಿ ಮತ್ತು ಕಾರ್ಯಾಗಾರ, ಸಾಹಸ ಕ್ರೀಡೆ ಮತ್ತು ಚಾರಣ ಶಿಬಿರ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ, ಯುವ ಸಪ್ತಾಹ ಕಾರ್ಯಕ್ರಮ ವೆಚ್ಚ ಭರಿಸಲಾಗಿದೆ. | 102.26 | 4.50 | 4.50 | 4.50 | 4.50 | 4.50 | 4.50 | 4.50 | 4.50 |
| **2024-25**<br>ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ, ಯುವಜನೋತ್ಸವ ಕಾರ್ಯಕ್ರಮ, ಅಂಗವಿಕಲ ಕ್ರೀಡಾಕೂಟ, ಯುವತರಬೇತಿ ಮತ್ತು ಕಾರ್ಯಾಗಾರ, ಸಾಹಸ ಕ್ರೀಡೆ ಮತ್ತು ಚಾರಣ ಶಿಬಿರ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ, ಯುವ ಸಪ್ತಾಹ ಕಾರ್ಯಕ್ರಮ ವೆಚ್ಚ ಭರಿಸಲಾಗಿದೆ. | 106.09 | 4.50 | 4.50 | 4.50 | 4.50 | 4.50 | 4.50 | 4.50 | 4.50 |

## ಅನುಬಂಧ-3

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಕ್ರೀಡಾಂಗಣಗಳ ಮತ್ತು ತಾಲ್ಲೂಕು ಕ್ರೀಡಾಂಗಣಗಳ ವಿವರ

### ಪೂರ್ಣಗೊಂಡಿರುವ ಜಿಲ್ಲಾ ಕ್ರೀಡಾಂಗಣಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಸ್ಥಳ |
|---|---|---|
| 1 | ಬೆಂಗಳೂರು ನಗರ | ಶ್ರೀ ಕಂಠೀರವ ಕ್ರೀಡಾಂಗಣ |
| 2 | ಬಾಗಲಕೋಟೆ | ಬಾಗಲಕೋಟೆ |
| 3 | ಬಳ್ಳಾರಿ | ಬಳ್ಳಾರಿ |
| 4 | ಬೆಳಗಾವಿ | ಬೆಳಗಾವಿ |
| 5 | ಬೀದರ್ | ಬೀದರ್ |
| 6 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 7 | ಚಿಕ್ಕಮಗಳೂರು | ಚಿಕ್ಕಮಗಳೂರು |
| 8 | ಚಿತ್ರದುರ್ಗ | ಚಿತ್ರದುರ್ಗ |
| 9 | ದಕ್ಷಿಣ ಕನ್ನಡ | ಮಂಗಳೂರು |
| 10 | ದಾವಣಗೆರೆ | ದಾವಣಗೆರೆ |
| 11 | ಧಾರವಾಡ | ಧಾರವಾಡ |
| 12 | ಗದಗ | ಗದಗ |
| 13 | ಹಾಸನ | ಹಾಸನ |
| 14 | ಹಾವೇರಿ | ಹಾವೇರಿ |
| 15 | ಕಲಬುರಗಿ | ಕಲಬುರಗಿ |
| 16 | ಕೊಡಗು | ಮಡಿಕೇರಿ |
| 17 | ಕೋಲಾರ | ಕೋಲಾರ |
| 18 | ಕೊಪ್ಪಳ | ಕೊಪ್ಪಳ |
| 19 | ಮಂಡ್ಯ | ಮಂಡ್ಯ |
| 20 | ಮೈಸೂರು | ಮೈಸೂರು |
| 21 | ರಾಮನಗರ | ರಾಮನಗರ |
| 22 | ರಾಯಚೂರು | ರಾಯಚೂರು |
| 23 | ಶಿವಮೊಗ್ಗ | ಶಿವಮೊಗ್ಗ |
| 24 | ತುಮಕೂರು | ತುಮಕೂರು |
| 25 | ಉಡುಪಿ | ಉಡುಪಿ |
| 26 | ಉತ್ತರ ಕನ್ನಡ | ಶಿರಸಿ |
| 27 | ವಿಜಯಪುರ | ವಿಜಯಪುರ |
| 28 | ಯಾದಗಿರಿ | ಯಾದಗಿರಿ |
| 29 | ಚಾಮರಾಜನಗರ | ಚಾಮರಾಜನಗರ |

### ಪೂರ್ಣಗೊಂಡಿರುವ ತಾಲ್ಲೂಕು ಕ್ರೀಡಾಂಗಣಗಳ ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು |
|---|---|---|
| 1. | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ |
| 2. | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ |
| 3. | ಬೆಂಗಳೂರು ಗ್ರಾಮಾಂತರ | ಹೊಸಕೋಟೆ |
| 4. | ಬೆಂಗಳೂರು ಗ್ರಾಮಾಂತರ | ನೆಲಮಂಗಲ |

| | | |
|---|---|---|
| 5. | ಬೆಂಗಳೂರು ನಗರ | ಆನೇಕಲ್ |
| 6. | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ (ಹೊನ್ನಗಾನಹಟ್ಟಿ) |
| 7. | ಬೆಂಗಳೂರು ನಗರ | ಬೆಂಗಳೂರು ಉತ್ತರ (ರಾವುತ್ತನಹಳ್ಳಿ) |
| 8. | ಬಾಗಲಕೋಟೆ | ಬೀಳಗಿ |
| 9. | ಬಾಗಲಕೋಟೆ | ಹುನಗುಂದ |
| 10. | ಬಾಗಲಕೋಟೆ | ಜಮಖಂಡಿ |
| 11. | ಬಾಗಲಕೋಟೆ | ಮುಧೋಳ |
| 12. | ಬಾಗಲಕೋಟೆ | ಇಳಕಲ್ |
| 13. | ಬಳ್ಳಾರಿ | ಸಿರಗುಪ್ಪ |
| 14. | ಬಳ್ಳಾರಿ | ಸಂಡೂರು |
| 15. | ಬಳ್ಳಾರಿ | ಕೊಟ್ಟೂರು |
| 16. | ಬೆಳಗಾವಿ | ಅಥಣಿ |
| 17. | ಬೆಳಗಾವಿ | ಬೈಲಹೊಂಗಲ |
| 18. | ಬೆಳಗಾವಿ | ಚಿಕ್ಕೋಡಿ |
| 19. | ಬೆಳಗಾವಿ | ಗೋಕಾಕ |
| 20. | ಬೆಳಗಾವಿ | ಹುಕ್ಕೇರಿ |
| 21. | ಬೆಳಗಾವಿ | ರಾಯಭಾಗ |
| 22. | ಬೆಳಗಾವಿ | ಸವದತ್ತಿ |
| 23. | ಬೆಳಗಾವಿ | ಖಾನಾಪುರ |
| 24. | ಬೀದರ | ಬಸವಕಲ್ಯಾಣ |
| 25. | ಬೀದರ | ಔರಾದ್ |
| 26. | ಬೀದರ | ಹುಮ್ನಾಬಾದ್ |
| 27. | ಚಾಮರಾಜನಗರ | ಗುಂಡ್ಲುಪೇಟೆ |
| 28. | ಚಾಮರಾಜನಗರ | ಕೊಳ್ಳೇಗಾಲ |
| 29. | ಚಾಮರಾಜನಗರ | ಹನೂರು |
| 30. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ |
| 31. | ಚಿಕ್ಕಬಳ್ಳಾಪುರ | ಚಿಂತಾಮಣಿ |
| 32. | ಚಿಕ್ಕಬಳ್ಳಾಪುರ | ಗೌರಿಬಿದನೂರು |
| 33. | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ |
| 34. | ಚಿಕ್ಕಮಗಳೂರು | ಕಡೂರು |
| 35. | ಚಿಕ್ಕಮಗಳೂರು | ಮೂಡಿಗೆರೆ |
| 36. | ಚಿಕ್ಕಮಗಳೂರು | ನರಸಿಂಹರಾಜಪುರ |
| 37. | ಚಿತ್ರದುರ್ಗ | ಚಳ್ಳಕೆರೆ |
| 38. | ಚಿತ್ರದುರ್ಗ | ಹಿರಿಯೂರು |
| 39. | ಚಿತ್ರದುರ್ಗ | ಹೊಸದುರ್ಗ |
| 40. | ದಕ್ಷಿಣ ಕನ್ನಡ | ಬೆಳ್ತಂಗಡಿ |
| 41. | ದಕ್ಷಿಣ ಕನ್ನಡ | ಪುತ್ತೂರು |
| 42. | ದಕ್ಷಿಣ ಕನ್ನಡ | ಸುಳ್ಯ |
| 43. | ದಕ್ಷಿಣ ಕನ್ನಡ | ಮೂಡಬಿದರೆ |
| 44. | ದಾವಣಗೆರೆ | ಚನ್ನಗಿರಿ |
| 45. | ದಾವಣಗೆರೆ | ಹರಿಹರ |
| 46. | ದಾವಣಗೆರೆ | ಹೊನ್ನಾಳಿ |

| | | |
|---|---|---|
| 47. | ದಾವಣಗೆರೆ | ಜಗಳೂರು |
| 48. | ಧಾರವಾಡ | ಅಳ್ನಾವರ |
| 49. | ಗದಗ | ಮುಂಡರಗಿ |
| 50. | ಗದಗ | ನರಗುಂದ |
| 51. | ಗದಗ | ರೋಣ |
| 52. | ಗದಗ | ಶಿರಹಟ್ಟಿ |
| 53. | ಹಾಸನ | ಆಲೂರು |
| 54. | ಹಾಸನ | ಅರಸೀಕೆರೆ |
| 55. | ಹಾಸನ | ಅರಕಲಗೂಡು |
| 56. | ಹಾಸನ | ಬೇಲೂರು |
| 57. | ಹಾಸನ | ಚನ್ನರಾಯಪಟ್ಟಣ |
| 58. | ಹಾಸನ | ಹೊಳೆನರಸೀಪುರ |
| 59. | ಹಾಸನ | ಸಕಲೇಶಪುರ |
| 60. | ಹಾವೇರಿ | ಬ್ಯಾಡಗಿ |
| 61. | ಹಾವೇರಿ | ಹಾನಗಲ್ |
| 62. | ಹಾವೇರಿ | ಹಿರೇಕೆರೂರು |
| 63. | ಹಾವೇರಿ | ರಾಣೇಬೆನ್ನೂರು |
| 64. | ಹಾವೇರಿ | ಸವಣೂರು |
| 65. | ಹಾವೇರಿ | ಶಿಗ್ಗಾಂವ್ |
| 66. | ಕಲಬುರಗಿ | ಆಲಂದ |
| 67. | ಕಲಬುರಗಿ | ಚಿಂಚೋಳಿ |
| 68. | ಕಲಬುರಗಿ | ಚಿತ್ತಾಪೂರ |
| 69. | ಕಲಬುರಗಿ | ಜೇವರ್ಗಿ |
| 70. | ಕಲಬುರಗಿ | ಸೇಡಂ |
| 71. | ಕೊಡಗು | ಸೋಮವಾರಪೇಟೆ |
| 72. | ಕೊಡಗು | ಪೊನ್ನಂಪೇಟೆ |
| 73. | ಕೋಲಾರ | ಬಂಗಾರಪೇಟೆ |
| 74. | ಕೋಲಾರ | ಮಾಲೂರು |
| 75. | ಕೋಲಾರ | ಮುಳಬಾಗಿಲು |
| 76. | ಕೋಲಾರ | ಶ್ರೀನಿವಾಸಪುರ |
| 77. | ಕೊಪ್ಪಳ | ಕೊಪ್ಪಳ |
| 78. | ಕೊಪ್ಪಳ | ಗಂಗಾವತಿ |
| 79. | ಕೊಪ್ಪಳ | ಕುಷ್ಟಗಿ |
| 80. | ಕೊಪ್ಪಳ | ಯಲಬುರ್ಗಾ |
| 81. | ಮಂಡ್ಯ | ಕೆ.ಆರ್.ಪೇಟೆ |
| 82. | ಮಂಡ್ಯ | ಮದ್ದೂರು |
| 83. | ಮಂಡ್ಯ | ಮಳವಳ್ಳಿ |
| 84. | ಮಂಡ್ಯ | ನಾಗಮಂಗಲ |
| 85. | ಮಂಡ್ಯ | ಪಾಂಡವಪುರ |
| 86. | ಮಂಡ್ಯ | ಶ್ರೀರಂಗಪಟ್ಟಣ |
| 87. | ಮೈಸೂರು | ಹೆಗ್ಗಡದೇವನಕೋಟೆ |
| 88. | ಮೈಸೂರು | ಹುಣಸೂರು |

| | | |
|---|---|---|
| 89. | ಮೈಸೂರು | ಕೃಷ್ಣರಾಜನಗರ |
| 90. | ಮೈಸೂರು | ನಂಜನಗೂಡು |
| 91. | ಮೈಸೂರು | ಪಿರಿಯಾಪಟ್ಟಣ |
| 92. | ರಾಮನಗರ | ಕನಕಪುರ |
| 93. | ರಾಯಚೂರು | ದೇವದುರ್ಗ |
| 94. | ರಾಯಚೂರು | ಸಿಂಧನೂರು |
| 95. | ರಾಯಚೂರು | ಲಿಂಗಸಗೂರು |
| 96. | ರಾಯಚೂರು | ಮಾನ್ವಿ |
| 97. | ಶಿವಮೊಗ್ಗ | ಹೊಸನಗರ |
| 98. | ಶಿವಮೊಗ್ಗ | ಸಾಗರ |
| 99. | ಶಿವಮೊಗ್ಗ | ಶಿಕಾರಿಪುರ |
| 100. | ಶಿವಮೊಗ್ಗ | ಸೊರಬ |
| 101. | ಶಿವಮೊಗ್ಗ | ತೀರ್ಥಹಳ್ಳಿ |
| 102. | ತುಮಕೂರು | ಚಿಕ್ಕನಾಯಕನಹಳ್ಳಿ |
| 103. | ತುಮಕೂರು | ಕೊರಟಗೆರೆ |
| 104. | ತುಮಕೂರು | ಕುಣಿಗಲ್ |
| 105. | ತುಮಕೂರು | ಮಧುಗಿರಿ |
| 106. | ತುಮಕೂರು | ಪಾವಗಡ |
| 107. | ತುಮಕೂರು | ಶಿರಾ |
| 108. | ತುಮಕೂರು | ತಿಪಟೂರು |
| 109. | ತುಮಕೂರು | ತುರುವೇಕೆರೆ |
| 110. | ಉಡುಪಿ | ಕಾರ್ಕಳ |
| 111. | ಉಡುಪಿ | ಕುಂದಾಪುರ |
| 112. | ಉಡುಪಿ | ಹೆಜಮಾಡಿ (ಕಾಪು) |
| 113. | ಉತ್ತರಕನ್ನಡ | ಅಂಕೋಲ |
| 114. | ಉತ್ತರಕನ್ನಡ | ಭಟ್ಕಳ |
| 115. | ಉತ್ತರಕನ್ನಡ | ಹಳಿಯಾಳ |
| 116. | ಉತ್ತರಕನ್ನಡ | ಜೋಯಿಡಾ |
| 117. | ಉತ್ತರಕನ್ನಡ | ಮುಂಡಗೋಡ |
| 118. | ಉತ್ತರಕನ್ನಡ | ಯಲ್ಲಾಪುರ |
| 119. | ಉತ್ತರಕನ್ನಡ | ಕಾರವಾರ |
| 120. | ವಿಜಯಪುರ | ಇಂಡಿ |
| 121. | ವಿಜಯಪುರ | ಸಿಂದಗಿ |
| 122. | ವಿಜಯನಗರ | ಹೂವಿನಹಡಗಲಿ |
| 123. | ವಿಜಯನಗರ | ಹೊಸಪೇಟೆ |
| 124. | ವಿಜಯನಗರ | ಹರಪನಹಳ್ಳಿ |
| 125. | ಯಾದಗಿರಿ | ಶಹಾಪುರ |
| 126. | ಯಾದಗಿರಿ | ಗುರುಮಿಠಕಲ್ |

## ಅನುಬಂಧ-4

## 2023-24 ನೇ ಸಾಲಿನಲ್ಲಿ ಯುವ ಚೈತನ್ಯ ಕಾರ್ಯಕ್ರಮದಡಿ ಕ್ರೀಡಾ ಕಿಟ್ ವಿತರಣೆ ಮಾಡಲಾದ ಯುವ ಸಂಘಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | | ಸಂಘಗಳ ವಿವರ | ನಗರ/ಗ್ರಾಮಾಂತರ ಪ್ರದೇಶ |
|---|---|---|---|---|
| | | | **ಬೆಂಗಳೂರು ವಿಭಾಗ** | |
| 1 | **ಬೆಂಗಳೂರು ನಗರ** | 1 | ಶುಭೋದಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ<br>ನಂ.245, ವಿಕ್ರಮಾದಿತ್ಯ ರಸ್ತೆ, ಲಕ್ಷ್ಮೀಪುರ, ಬೆಂಗಳೂರು-560019 | ನಗರ |
| | | 2 | ಯುವಕ ಸಂಘ (ರಿ)<br>ನಂ 33, 1ನೇ ಮೈನ್, 3ನೇ ಕ್ರಾಸ್, ಸುಬೇದಾರಪಾಳ್ಯ, ಯಶವಂತಪುರ, ಬೆಂಗಳೂರು-22 | ನಗರ |
| | | 3 | ಸುಭಾಷ್ ಚಂದ್ರಬೋಸ್ ಕ್ರೀಡಾ ಮತ್ತು ಸಾಂಸ್ಕೃತಿಕ ಯುವಕರ ಸಂಘ<br>ನಂ 399, 18ನೇ ಕ್ರಾಸ್, ಅಮೃತಹಳ್ಳಿ, ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು-64. | ನಗರ |
| | | 4 | ಏಕಲವ್ಯ ಕ್ರೀಡಾ ಮತ್ತು ಸಾಂಸ್ಕೃತಿಕ ಯುವ ಸಂಘ<br>ಈ-29, 1ನೇ ಮುಖ್ಯರಸ್ತೆ, ಬ್ಯಾಂಕ್ ನಗರ, ಎಳೆನಹಳ್ಳಿ, ಬೆಂಗಳೂರು-58 | ನಗರ |
| | | 5 | ಜೆ.ಪಿ.ಪರ್ಕ್ ಟೇಕ್ವಾಂಡೋ ತರಬೇತಿ ಕೇಂದ್ರ ಮತ್ತು ಕ್ರೀಡೆ ಕಲೆ ಪರಿಸರ ಯುವಜನ ಸೇವಾ ಸಂಘ<br>ನಂ 26, 8ನೇ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು-22 | ನಗರ |
| 2 | **ಬೆಂಗಳೂರು ಗ್ರಾಮಾಂತರ** | 6 | ವಿನಾಯಕ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ)<br>ದೇವನಹಳ್ಳಿ ತಾಲೂಕು | ಗ್ರಾಮಾಂತರ |
| | | 7 | ಮಾತೃಭೂಮಿ ಕನ್ನಡ ಯುವಜನ ಸಂಘ (ರಿ)<br>12 ನೇ ವಾರ್ಡ್, ಹಂಜನ ಕಾಲೋನಿ, ದೇವನಹಳ್ಳಿ ತಾಲೂಕು | ನಗರ |
| | | 8 | ಮಹಾನಾಯಕ ಡಾ\|\| ಬಿ.ಆರ್ ಅಂಬೇಡ್ಕರ್ ಯುವಕರ ಸಂಘ<br>ಮರಳು ಬಾಗಿಲು, ಹಳೆ ಬಸ್ ನಿಲ್ದಾಣ, ದೇವನಹಳ್ಳಿ ತಾಲೂಕು | ನಗರ |

| | | | | |
|---|---|---|---|---|
| | | 9 | ಯುವ ಸಂಚಲನ<br>ಅರಳುಮಲ್ಲಿಗೆ, ದೊಡ್ಡಬಳ್ಳಾಪುರ ತಾಲೂಕು | ನಗರ |
| | | 10 | ನಾಡಪ್ರಭು ಕೆಂಪೇಗೌಡ ಯುವಕರ ಸಂಘ,<br>ಸೂಲಿಬೆಲೆ | ಗ್ರಾಮಾಂತರ |
| 3 | **ಚಿತ್ರದುರ್ಗ** | 11 | ಜೈಭಗತ್ ಸಿಂಗ್ ಯುವ ಪಡೆ (ರಿ)<br>ಟಿ.ಎನ್.ಕೋಟೆ, ಚಳ್ಳಕೆರೆ ತಾಲೂಕು-577538 | ಗ್ರಾಮಾಂತರ |
| | | 12 | ಅಶೋಕ ಯುವಕ ಸಂಘ<br>ಕಾಟಪ್ಪನಹಟ್ಟಿ, ಬಡಾವಣೆ, ಚಳ್ಳಕೆರೆ<br>ತಾಲೂಕು | ಗ್ರಾಮಾಂತರ |
| | | 13 | ಅಮೃತವರ್ಷಿಣಿ ಯುವಕ ಸಂಘ, ಹೊಸದುರ್ಗ<br>ತಾಲೂಕು | ನಗರ |
| | | 14 | ಆದರ್ಶ ಯುವಕ ಸಂಘ<br>ಮಳಲಿ, ವಡ್ನರಪಾಳ್ಯ ಅಂಚೆ, ಚಿತ್ರದುರ್ಗ<br>ತಾಲೂಕು | ಗ್ರಾಮಾಂತರ |
| | | 15 | ಶ್ರೀ ಕನಕ ಯುವಕ ಸಂಘ<br>ಹರ್ತಿಕೋಟೆ, ಹಿರಿಯೂರು ತಾಲೂಕು | ಗ್ರಾಮಾಂತರ |
| | | 16 | ಶ್ರೀ ವೀರಶೈವ ಯುವಕ ಸಂಘ<br>ಕೊಂಡ್ಲಹಳ್ಳಿ, ಮೊಳಕಾಲ್ಮೂರು ತಾಲೂಕು | ಗ್ರಾಮಾಂತರ |
| 4 | **ದಾವಣಗೆರೆ** | 17 | ಶ್ರೀ ಸೇವಾಲಾಲ್ ಯುವಕರ ಸಂಘ (ಎಸ್.ಸಿ),<br>ಕಬ್ಬಳ | ಗ್ರಾಮಾಂತರ |
| | | 18 | ಹರಿಹರೇಶ್ವರ ಕ್ರೀಡಾ ಮತ್ತು ಸಾಂಸ್ಕೃತಿಕ<br>ಯುವಕ ಸಂಘ, ದುರ್ವಿಗೆಡ | ಗ್ರಾಮಾಂತರ |
| | | 19 | ಹಾಲುರಾಮೇಶ್ವರ ಕ್ರೀಡಾ ಮತ್ತು ಸಾಂಸ್ಕೃತಿಕ<br>ಯುವಕ ಸಂಘ (ಎಸ್.ಸಿ), ದುರ್ವಿಗೆಡ | ಗ್ರಾಮಾಂತರ |
| | | 20 | ಜೈ ಹನುಮಾನ್ ಸಾಂಸ್ಕೃತಿಕ ಯುವಕ ಸಂಘ,<br>ಬಳ್ಳೂಡಿ | ಗ್ರಾಮಾಂತರ |
| 5 | **ಕೋಲಾರ** | 21 | ಶ್ರೀ ವೇಣುಗೋಪಾಲ ಸ್ವಾಮಿ ಯುವಕರ ಬಳಗ<br>ಬೆಳ್ಳಂಬರಿ ಗ್ರಾಮ, ನುಕ್ಕನಹಳ್ಳಿ ಅಂಚೆ,<br>ಕೋಲಾರ ತಾಲೂಕು | ಗ್ರಾಮಾಂತರ |
| | | 22 | ಸಾಮ್ರಾಟ್ ಯುವಕರ ಸಂಘ<br>ಮಲ್ಲಗಾನಹಳ್ಳಿ ಗ್ರಾಮ, ಶ್ರೀನಿವಾಸಪುರ<br>ತಾಲೂಕು | ಗ್ರಾಮಾಂತರ |
| | | 23 | ತೇಜಸ್ವಿನಿ ಸಾಂಸ್ಕೃತಿಕ ಕಲಾ ಸಂಘ<br>ನೇರಳಕೆರೆ ಸರ್ಕಲ್, ಎಸ್ ಜಿ ಕೋಟೆ ಗ್ರಾಮ<br>ಮತ್ತು ಅಂಚೆ, ಬಂಗಾರಪೇಟೆ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 24 | ಈ ನೆಲ ಈ ಜಲ ಕಲೆ ಮತ್ತು ಸಾಂಸ್ಕೃತಿಕ ಕಲಾ ಸಂಘ<br>ಚೌಡದೇನಹಳ್ಳಿ, ವಕ್ಕಲೇರಿ ಹೋಬಳಿ, ಕೋಲಾರ ತಾಲೂಕು | ಗ್ರಾಮಾಂತರ |
| | | 25 | ಸ್ವರ ಗಾನ ಸಾಂಸ್ಕೃತಿಕ ಕಲಾ ಸಂಘ<br>ನುಕ್ಕನಹಳ್ಳಿ ಗ್ರಾಮ ಮತ್ತು ಅಂಚೆ, ಕೋಲಾರ ತಾಲೂಕು | ಗ್ರಾಮಾಂತರ |
| | | 26 | ಕರುನಾಡ ಜಾನಪದ ಕಲಾ ಸಂಘ<br>ಗುಟ್ಟೂರು ಗ್ರಾಮ, ಹುತ್ತೂರು ಅಂಚೆ, ಕೋಲಾರ ತಾಲೂಕು | ಗ್ರಾಮಾಂತರ |
| | | 27 | ಜೈ ಮಾರುತಿ ಸಂಸ್ಕೃತಿಕ ಕಲಾವಿದರ ಸಂಘ<br>ಕಪ್ಪಲಮಡಗು ಗ್ರಾಮ, ಮುಳಬಾಗಿಲು ತಾಲೂಕು | ಗ್ರಾಮಾಂತರ |
| | | 28 | ರಮಭಾಯಿ ಸಾಂಸ್ಕೃತಿಕ ಕಲಾ ಸಂಘ,<br>ಶ್ರೀನಿವಾಸಪುರ ಟೌನ್ | ಗ್ರಾಮಾಂತರ |
| | | 29 | ಜೋಗುಳ ಜಾನಪದ ಸಂಸ್ಥೆ<br>ಚಿನ್ನಾಪುರ ಗ್ರಾಮ, ಕೋಲಾರ ತಾಲೂಕು | ಗ್ರಾಮಾಂತರ |
| | | 30 | ಹಳ್ಳಿ ಹಾಡು ಸಾಂಸ್ಕೃತಿಕ ಕಲಾ ಸಂಘ<br>ಮತ್ತಿಕುಂಟೆ ಗ್ರಾಮ, ಕೋಲಾರ ತಾಲೂಕು | ಗ್ರಾಮಾಂತರ |
| | | 31 | ತಾಯಿನಾಡು ತಮಟೆ ಕಲಾವಿದರ ಸಂಘ<br>ಬಂಗಾರಪೇಟೆ ತಾಲೂಕು | ಗ್ರಾಮಾಂತರ |
| 6 | **ಚಿಕ್ಕಬಳ್ಳಾಪುರ** | 32 | ಡಾ\|\| ಬಿ.ಆರ್. ಅಂಬೇಡ್ಕರ್ ಯುವಕ ಸಂಘ<br>ಅಂದ್ಲಾರಹಳ್ಳಿ, ಚಿಕ್ಕಬಳ್ಳಾಪುರ ತಾಲೂಕು | ಗ್ರಾಮಾಂತರ |
| | | 33 | ಜಿಲ್ಲಾ ಅಥ್ಲೇಟಿಕ್ ಯುವ ಕ್ರೀಡಾ ಸಂಘ<br>ಚಿಕ್ಕಬಳ್ಳಾಪುರ ತಾಲೂಕು | ನಗರ |
| | | 34 | ಜೈಭೀಮ್ ಅಂಬೇಡ್ಕರ್ ಯುವಕರ ಸಂಘ<br>ಬಶೆಟ್ಟಿಹಳ್ಳಿ, ಶಿಡ್ಲಘಟ್ಟ ತಾಲೂಕು | ಗ್ರಾಮಾಂತರ |
| | | 35 | ಶ್ರೀ ಪೂಜಮ್ಮದೇವಿ ಯುವಕರ ಸಂಘ<br>ಚಿಕ್ಕದಾಸರಹಳ್ಳಿ, ಶಿಡ್ಲಘಟ್ಟ | ಗ್ರಾಮಾಂತರ |
| | | 36 | ಶ್ರೀ ಲೋಕಮಾನ್ಯ ಬಾಲ ಗಂಗಾಧರ ನಾಥ ತಿಲಕ್ ಯುವಕರ ಕ್ರೀಡಾ ಸಂಘ, ತಳಗವಾರ ಗ್ರಾಮ, ಚಿಂತಾಮಣಿ ತಾಲೂಕು | ಗ್ರಾಮಾಂತರ |
| | | 37 | ಶ್ರೀ ವಾಲ್ಮೀಕಿ ಕ್ರೀಡಾ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಘ (ರಿ)<br>ಮಲ್ಲಸಂದ್ರ ಗ್ರಾಮ, ಬಾಗೇಪಲ್ಲಿ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 38 | ಡಾ|| ಬಿ.ಆರ್ ಅಂಬೇಡ್ಕರ್ ಯುವಕರ ಕ್ಷೇಮಾಭಿವೃದ್ಧಿ ಬಳಗ (ರಿ) ಹಂಪಸಂದ್ರ, ಗುಡಿಬಂಡೆ ತಾಲೂಕು | ಗ್ರಾಮಾಂತರ |
| 7 | **ರಾಮನಗರ** | 39 | ಭುವನೇಶ್ವರಿ ಕನ್ನಡ ಸಂಘ, ರಾಮನಗರ | ನಗರ |
| | | 40 | ಅರುಣ ಯುವಕ ಮಂಡಳಿ, ಚನ್ನಪಟ್ಟಣ | ನಗರ |
| | | 41 | ನವ ಚೇತನ ಸಾಂಸ್ಕೃತಿಕ ಕಲಾ ಬಳಗ, ಚನ್ನಪಟ್ಟಣ | ನಗರ |
| | | 42 | ಚತ್ರಪತಿ ಸಾಹುಮಹರಾಜ್ ಯುವಕರ ಸಂಘ, ಕನಕಪುರ | ನಗರ |
| 8 | **ಶಿವಮೊಗ್ಗ** | 43 | ಹಾಲಸಿದ್ದೇಶ್ವರ ಯುವಕ ಸಂಘ ಅಂಬಾರಿಕೊಪ್ಪ, ಶಿಕಾರಿಪುರ ತಾಲೂಕು | ಗ್ರಾಮಾಂತರ |
| | | 44 | ಡಾ. ಅಂಬೇಡ್ಕರ್ ಯುವಕ ಸಂಘ ಸಿದ್ಲಿಪುರ, ಭದ್ರಾವತಿ ತಾಲೂಕು | ಗ್ರಾಮಾಂತರ |
| | | 45 | ಜಿಮ್ಮಿ ಜಾರ್ಜ್ ವಾಲಿಬಾಲ್ ಕ್ಲಬ್ ಹೊಸನಗರ ತಾಲೂಕು | ನಗರ |
| | | 46 | ಹವಳಾಂಬಿಕ ಕಲಾ ಮತ್ತು ಕ್ರೀಡಾ ಸಂಘ ಶಿಗ್ಗಾ, ಸೊರಬ | ಗ್ರಾಮಾಂತರ |
| | | 47 | ಆಂಜನೇಯ ಯುವಕ ಸಂಘ ಗುಂಜನೂರು, ಸೊರಬ | ಗ್ರಾಮಾಂತರ |
| | | 48 | ಮಹಾಗಣಪತಿ ಯುವಕ ಸಂಘ ಮತ್ತಿಕೆರೆ, ಸಾಗರ | ಗ್ರಾಮಾಂತರ |
| | | 49 | ರಂಗೋಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ ತುಮರಿ, ಸಾಗರ | ಗ್ರಾಮಾಂತರ |
| | | 50 | ಪ್ರಕೃತಿ ಯುವಕ ಸಂಘ, ತೀರ್ಥಹಳ್ಳಿ | ಗ್ರಾಮಾಂತರ |
| | | 51 | ಹೊನ್ನೂರಮ್ಮದೇವಿ ಯುವಕ ಸಂಘ ಹೊಳೆಹೊನ್ನೂರು, ಭದ್ರಾವತಿ | ಗ್ರಾಮಾಂತರ |
| 9 | **ತುಮಕೂರು** | 52 | ಡಾ. ರಾಜ್ ಕುಮಾರ್ ಕಲಾ ಯುವಕ ಸಂಘ ಚಿನಗ, ತುಮಕೂರು ತಾಲೂಕು | ಗ್ರಾಮಾಂತರ |
| | | 53 | ಶ್ರೀ ಸೇವಾಲಾಲ್ ಯುವಕರ ಸಂಘ (ರಿ) ಪನ್ನೇನಹಳ್ಳಿ ಲಂಬಾಣಿ ತಾಂಡ, ಗುಬ್ಬಿ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 54 | ವಿವೇಕಾನಂದ ಯುವಕರ ಸಂಘ<br>ಜಲಧಿಗೆರೆ, ಕುಣಿಗಲ್ ತಾಲೂಕು | ನಗರ |
| | | 55 | ಶ್ರೀ ಕಲ್ಲೇಶ್ವರ ಯುವಕ ಸಂಘ (ರಿ)<br>ಅರಳಗುಪ್ಪೆ, ತಿಪಟೂರು ತಾಲೂಕು | ಗ್ರಾಮಾಂತರ |
| | | 56 | ಶ್ರೀ ವಿನಾಯಕ ಯುವಕರ ಕ್ರೀಡಾ ಸಂಘ<br>ಕೊಡಲಾಗರ ಗ್ರಾಮ, ಚಿಕ್ಕನಾಯಕನಹಳ್ಳಿ ತಾಲೂಕು | ಗ್ರಾಮಾಂತರ |
| | | | **ಮೈಸೂರು ವಿಭಾಗ** | |
| 10 | **ಮೈಸೂರು** | 57 | ವಿಶ್ವಜ್ಞಾನಿ ಭೀಮ ಬಳಗ, ನಂಜನಗೂಡು ತಾಲೂಕು | ಗ್ರಾಮಾಂತರ |
| | | 58 | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಕರ ಸಂಘ, ಹೆಗ್ಗನೂರು, ಮೈಸೂರು | ಗ್ರಾಮಾಂತರ |
| | | 59 | ಜೈಭೀಮ್ ಬಂದು ಬಳಗ, ಟಿ ನರಸೀಪುರ ರಸ್ತೆ, ಮೈಸೂರು | ನಗರ |
| | | 60 | ಶ್ರೀ ಕನಕರಾಯಣ್ಣ ಯುವಕರ ಸಂಘ,<br>ಹುಣಸೂರು ತಾಲೂಕು | ಗ್ರಾಮಾಂತರ |
| | | 61 | ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಯುವಕರ ಸಂಘ<br>ಟಿ ನರಸೀಪುರ ತಾಲೂಕು | ಗ್ರಾಮಾಂತರ |
| | | 62 | ಡಾ. ಬಿ.ಆರ್ ಅಂಬೇಡ್ಕರ್ ಯುವಕರ ಸಂಘ<br>ನಂಜನಗೂಡು ತಾಲೂಕು | ಗ್ರಾಮಾಂತರ |
| | | 63 | ಡಾ. ಬಿ.ಆರ್ ಅಂಬೇಡ್ಕರ್ ಯುವಕರ ಸಂಘ<br>ಜಯನಗರ, ಮೈಸೂರು | ನಗರ |
| | | 64 | ಪ್ರಬುದ್ಧ ಕ್ರೀಡಾ ಕಲಾ ಬಳಗ, ಹೆಚ್.ಡಿ ಕೋಟೆ ತಾಲೂಕು | ಗ್ರಾಮಾಂತರ |
| | | 65 | ಡಾ. ಬಾಬು ಜಗಜೀವನರಾಮ್ ಕಲಾ ಯುವಕರ ಸಂಘ<br>ವರುಣ, ಮೈಸೂರು | ಗ್ರಾಮಾಂತರ |
| 11 | **ಚಾಮರಾಜನಗರ** | 66 | ಡಾ. ಬಿ.ಆರ್ ಅಂಬೇಡ್ಕರ್ ಯುವಕರ ಸಂಘ<br>ಯಳಂದೂರು ತಾಲೂಕು | ಗ್ರಾಮಾಂತರ |
| | | 67 | ಭೀಮ ಚೇತನ ಯುವಕರ ಸಂಘ,<br>ಯಳಂದೂರು ತಾಲೂಕು | ಗ್ರಾಮಾಂತರ |
| | | 68 | ವಾಲ್ಮೀಕಿ ಸಮಾಜ ಯುವಜನ ಸೇವಾ ಸಂಘ<br>ಕೊಳ್ಳೆಗಾಲ ತಾಲೂಕು | ಗ್ರಾಮಾಂತರ |
| | | 69 | ಪ್ರಬುದ್ಧ ಯುವಕರ ಸಂಘ, ಚಾಮರಾಜನಗರ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 70 | ಶ್ರೀ ಮಹರ್ಷಿ ವಾಲ್ಮೀಕಿ ಯುವಕರ ಸಂಘ<br>ಚಾಮರಾಜನಗರ ತಾಲೂಕು | ಗ್ರಾಮಾಂತರ |
| | | 71 | ಜೈ ಭೀಮ್ ಯುವಜನ ಸಂಘ, ಹನೂರು<br>ತಾಲೂಕು | ಗ್ರಾಮಾಂತರ |
| | | 72 | ವಿಶ್ವಜ್ಞಾನಿ ಡಾ. ಬಿ.ಆರ್ ಅಂಬೇಡ್ಕರ್<br>ಯುವಜನ ಸಂಘ<br>ಗುಂಡ್ಲುಪೇಟೆ ತಾಲೂಕು | ಗ್ರಾಮಾಂತರ |
| 12 | **ಚಿಕ್ಕಮಗಳೂರು** | 73 | ಸ್ವಾಮಿ ವಿವೇಕಾನಂದ ಯುವಕರ ಸಂಘ<br>ಹವ್ವಳ್ಳಿ, ಆಲ್ದೂರು, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 74 | ಜೈ ಭೀಮ್ ಅಂಬೇಡ್ಕರ್ ಯುವಕ ಸಂಘ<br>ಕೋಡಿಹಳ್ಳಿ, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 75 | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ<br>ಬಳಗ (ರಿ)<br>ಗೌಡನಹಳ್ಳಿ, ಚಿಕ್ಕಮಗಳೂರು ತಾಲುಕು | ಗ್ರಾಮಾಂತರ |
| | | 76 | ಮಹಾನಾಯಕ ಡಾ. ಬಿ.ಆರ್ ಅಂಬೇಡ್ಕರ್<br>ಯುವಕ ಸಂಘ<br>ಬಾಣೂರು, ಕಡೂರು ತಾಲೂಕು | ಗ್ರಾಮಾಂತರ |
| | | 77 | ಐದೂರು ಯುವಕ ಸಂಘ<br>ಜಕ್ಕನಹಳ್ಳಿ, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 78 | ಶ್ರೀ ಕನಕ ಯುವಕ ಸಂಘ<br>ಕುರುಬರಹಳ್ಳಿ, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 79 | ಶ್ರೀ ಕನಕದಾಸ ಕ್ರೀಡಾ ಮತ್ತು ಸಾಂಸ್ಕೃತಿಕ<br>ಸಂಘ (ರಿ)<br>ಜಡಗನಹಳ್ಳಿ, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 80 | ಡಾ.ಬಿ. ಆರ್. ಅಂಬೇಡ್ಕರ್ ಯುವಕ ಸಂಘ<br>ಲಕ್ಯಾ,ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 81 | ಚಿಕ್ಕಮಗಳೂರು ಜಿಲ್ಲಾ ಹಳ್ಳಿಕಾರ್ ಯುವಕರ<br>ಸಂಘ<br>ಕೋಟೆ, ಚಿಕ್ಕಮಗಳೂರು | ನಗರ |
| | | 82 | ಶ್ರೀ ವಿನಾಯಕ ಯುವಕ ಸಂಘ<br>ಅಡ್ಡಗದ್ದೆ, ಚಿಕ್ಕಮಗಳೂರು ತಾಲೂಕು | ಗ್ರಾಮಾಂತರ |
| | | 83 | ಶ್ರೀ ಏಕದಂತ ಯುವಕ ಸಂಘ<br>ಚಟ್ಟನ ಹಳ್ಳಿ, ಕಡೂರು ತಾಲ್ಲೂಕು | ಗ್ರಾಮಾಂತರ |
| | | 84 | ಕನಕ ಶ್ರೀ ಯುವಕ ಸಂಘ<br>ಕುರುಬಗೆರೆ, ಕಡೂರು ತಾಲ್ಲೂಕು | ಗ್ರಾಮಾಂತರ |

| | | | | |
|---|---|---|---|---|
| | | 85 | ಶ್ರೀ ರಾಮ ಯುವಕ ಸಂಘ<br>ಎನ್.ಜಿ ಕೊಪ್ಪಲು, ಕಡೂರು ತಾಲ್ಲೂಕು | ಗ್ರಾಮಾಂತರ |
| | | 86 | ಸ್ಫೂರ್ತಿ ಯುವ ಕಲಾ ಸಂಘ<br>ಕೋಟೆ ಕ್ಯಾಂಪ್, ತರಿಕೆರೆ ತಾಲ್ಲೂಕು | ಗ್ರಾಮಾಂತರ |
| | | 87 | ಶ್ರೀ ದುರ್ಗಾಪರಮೇಶ್ವರಿ ಗಿರಿಜನ ಯುವಕ ಸಂಘ<br>ಕಲ್ಲು ಗುಡ್ಡೆ, ಕೊಪ್ಪ ತಾಲ್ಲೂಕು | ಗ್ರಾಮಾಂತರ |
| | | 88 | ಶ್ರೀ ವಿನಾಯಕ ಗೆಳೆಯರ ಬಳಗ<br>ಸಾದರಹಳ್ಳಿ, ಚಿಕ್ಕಮಗಳೂರು ತಾಲ್ಲೂಕು | ಗ್ರಾಮಾಂತರ |
| | | 89 | ಸ್ವಾಮಿ ವಿವೇಕಾನಂದ ಯುವಕ ಸಂಘ<br>ಬೆಳವಾಡಿ, ಚಿಕ್ಕಮಗಳೂರು ತಾಲ್ಲೂಕು | ಗ್ರಾಮಾಂತರ |
| | | 90 | ಡಾ|| ಬಿ.ಆರ್. ಅಂಬೇಡ್ಕರ್ ಗ್ರಾಮಾಭಿವೃದ್ಧಿ ಯುವಕ ಸಂಘ<br>ಹಿರೇಮಗಳೂರು, ಚಿಕ್ಕಮಗಳೂರು ತಾಲ್ಲೂಕು | ನಗರ |
| | | 91 | ಪ್ರಗತಿ ಯುವಕ ಸಂಘ<br>ಇಂದಿರಾ ನಗರ , ಮೂಡಿಗೆರೆ ತಾಲ್ಲೂಕು | ಗ್ರಾಮಾಂತರ |
| | | 92 | ಮಲೆನಾಡು ಪರಿಶಿಷ್ಟ ಪಂಗಡ ಯುವಕ/ ಯುವತಿ ಸಂಘ<br>ಮೂಡಿಗೆರೆ ತಾಲ್ಲೂಕು | ಗ್ರಾಮಾಂತರ |
| 13 | **ದಕ್ಷಿಣ ಕನ್ನಡ** | 93 | ಅಶೋಕನಗರ ಯುವ ಸಂಘ (ರಿ)<br>ಅಶೋಕನಗರ, ಮಂಗಳೂರು ತಾಲೂಕು | ನಗರ |
| | | 94 | ಡಾ|| ಬಿ.ಆರ್. ಅಂಬೇಡ್ಕರ್ ಯುವಕ ಮಂಡಲ<br>ಕಂದಾವರ ಪದವು, ಕಿನ್ನಿಕಂಬಳ ಅಂಚೆ, ಮಂಗಳೂರು ತಾಲೂಕು | ಗ್ರಾಮಾಂತರ |
| | | 95 | ಜನಸೇವಾ ಯುವಕ ಮಂಡಲ<br>ಅಂಬ್ಲಮೊಗರು, ಮಂಗಳೂರು ತಾಲೂಕು | ಗ್ರಾಮಾಂತರ |
| | | 96 | ಸಸಿಹಿತ್ಲು ಯುವಕ ಮತ್ತು ಯುವತಿ ಮಂಡಲ<br>ಸಸಿಹಿತ್ಲು, ಮೂಡಬಿದಿರೆ ತಾಲೂಕು | ಗ್ರಾಮಾಂತರ |
| | | 97 | ಶ್ರೀ ವೀರಾಂಜನೇಯ ಯುವಕ ಸಂಘ ಸಜೀಪ (ರಿ)<br>ಸಜೀಪನಡು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು | ಗ್ರಾಮಾಂತರ |
| | | 98 | ವಿಟ್ಲ ಯುವಕ ಸಂಘ<br>ವಿಟ್ಲ, ಪುತ್ತೂರು ತಾಲೂಕು | ನಗರ |

| | | | | |
|---|---|---|---|---|
| | | 99 | ಯುವಕ ಮಂಡಲ (ರಿ)<br>ಕನಕಮಜಲು, ಕನಕಮಜಲು ಅಂಚೆ, ಸುಳ್ಯ ತಾಲೂಕು | ಗ್ರಾಮಾಂತರ |
| | | 100 | ಚಿರಂಜೀವಿ ಯುವಕ ಮಂಡಲ (ರಿ)<br>ಕಾನರ್ಪ, ಕಡಿರುದ್ಯಾದವರ, ಬೆಳ್ತಂಗಡಿ ತಾಲೂಕು | ಗ್ರಾಮಾಂತರ |
| | | 101 | ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ (ರಿ)<br>ತೋಕೂರು, ಹಳೆಯಂಗಡಿ, ಮಂಗಳೂರು | ಗ್ರಾಮಾಂತರ |
| | | 102 | ಶಿವಾಜಿ ಫ್ರೆಂಡ್ಸ್ ಸರ್ಕಲ್ (ರಿ)<br>ಭಟ್ ನಗರ, ತೊಕ್ಕಟ್ಟು, ಮಂಗಳೂರು | ನಗರ |
| | | 103 | ಯುವಶಕ್ತಿ ಗೆಳೆಯರ ಬಳಗ (ರಿ)<br>ವಿನಾಯಕ ನಗರ, ಕೋಡಿಂಬಾಡಿ, ಪುತ್ತೂರು ತಾಲೂಕು | ಗ್ರಾಮಾಂತರ |
| | | 104 | ಶ್ರೀ ವಿಷ್ಣು ಯುವಕ ಮಂಡಲ (ರಿ)<br>ಇರ್ದೆ ಉಪ್ಪಳಿಗೆ, ಪುತ್ತೂರು ತಾಲೂಕು | ಗ್ರಾಮಾಂತರ |
| | | 105 | ನಾರಾಯಣ ಗುರು ಯೂತ್ ಅಂಡ್ ಸ್ಪೋರ್ಟ್ಸ್ ಕ್ಲಬ್<br>ಮಂಗಳಾದೇವಿ ದೇವಸ್ಥಾನದ ಎದುರು, ಬೋಳಾರ ಅಂಚೆ, ಮಂಗಳೂರು. | ನಗರ |
| 14 | **ಹಾಸನ** | 106 | ನೇತಾಜಿ ಯುವ ಸಂಘ, ಹಾಸನ ತಾಲೂಕು | ನಗರ |
| | | 107 | ಸುಗ್ಗಿ-ಹುಗ್ಗಿ ಸಾಂಸ್ಕೃತಿಕ ಯುವಕ ಸಂಘ, ಹೊಳೆನರಸೀಪುರ ತಾಲೂಕು | ಗ್ರಾಮಾಂತರ |
| | | 108 | ಜಿಲ್ಲಾ ಯುವಜನ ಯುವಕ ಸಂಘ, ಹಾಸನ ತಾಲೂಕು | ನಗರ |
| | | 109 | ಧ್ವನಿ ಸಾಂಸ್ಕೃತಿಕ ಯುವಕ ಸಂಘ, ಹಾಸನ ತಾಲೂಕು | ಗ್ರಾಮಾಂತರ |
| | | 110 | ಹೊಯ್ಸಳ ಜನಪದ ಯುವಕ ಸಂಘ, ಆಲೂರು ತಾಲೂಕು | ಗ್ರಾಮಾಂತರ |
| | | 111 | ನಿರಂತರ ಸಾಂಸ್ಕೃತಿಕ ಯುವಕ ಸಂಘ, ಹೊಳೆನರಸೀಪುರ ತಾಲೂಕು | ಗ್ರಾಮಾಂತರ |
| | | 112 | ಬೀದಿ ನಾಟಕ ಯುವಕ ಸಂಘ, ಅರಸೀಕೆರೆ ತಾಲೂಕು | ಗ್ರಾಮಾಂತರ |
| | **ಕೊಡಗು** | 113 | ಶ್ರೀ ಸರಸ್ವತಿ ಯುವಕ ಸಂಘ<br>ನಲ್ಲೂರು, ಕಿರಗೂರು, ಪೊನ್ನಂಪೇಟೆ, ವಿರಾಜಪೇಟೆ | ಗ್ರಾಮಾಂತರ |
| | | 114 | ಶ್ರೀ ಭಗವಾನ್ ಯುವಕ ಸಂಘ<br>ಯು.ಚೆಂಬು ಗ್ರಾಮ, ಭಗವಾನ್ ನಿಲಯ, ಮಡಿಕೇರಿ | ಗ್ರಾಮಾಂತರ |

| | | | | |
|---|---|---|---|---|
| | | 115 | ಶ್ರೀ ಮಕ್ಕೆ ಸಾರ್ತಾವು ಯೂತ್ ಕ್ಲಬ್ ಬೇತು, ವಿರಾಜಪೇಟೆ ತಾಲೂಕು | ಗ್ರಾಮಾಂತರ |
| | | 116 | ಸ್ಟಾರ್ ಸ್ಪೋರ್ಟ್ಸ್ ಯುವಕ ಸಂಘ ನರಿಯಂಡ, ಎಡಪಾಲ | ಗ್ರಾಮಾಂತರ |
| | | 117 | ಚೌಡೇಶ್ವರಿ ಯುವಕ ಸಂಘ ಅಮ್ಮತ್ತಿ, ವಿರಾಜಪೇಟೆ ತಾಲೂಕು | ಗ್ರಾಮಾಂತರ |
| 16 | **ಉಡುಪಿ** | 118 | ಸಾಧನಾ ಯುವಕ ಮಂಡಲ, ಕೆಮ್ಮೂತ್ತಿರು | ಗ್ರಾಮಾಂತರ |
| | | 119 | ಇನ್ನಂಜೆ ಯುವಕ ಮಂಡಲ, ಇನ್ನಂಜೆ | ಗ್ರಾಮಾಂತರ |
| | | 120 | ಯುವ ವಿಚಾರ ವೇದಿಕೆ, ಕೊಳಲಗೇರಿ, ಉಪ್ಪೂರು | ಗ್ರಾಮಾಂತರ |
| | | 121 | ಯುವಕ ಮಂಡಲ, ಸಾಣೂರು | ಗ್ರಾಮಾಂತರ |
| | | 122 | ಮಹಾವಿಷ್ಣು ಯುವಕ ಮಂಡಲ, ಹರೆಗೋಡು | ಗ್ರಾಮಾಂತರ |
| | | 123 | ಚೆನ್ನಬಸವೇಶ್ವರ ಯುವಕ ಮಂಡಲ, ನಾಯಕ್ ವಾಡಿ | ಗ್ರಾಮಾಂತರ |
| | | 124 | ಯುವಕ ಮಂಡಲ, ಕುತ್ಯಾರು | ಗ್ರಾಮಾಂತರ |
| | | 125 | ಚೆನ್ನಬಸವೇಶ್ವರ ಯುವಕ ಮಂಡಲ, ಕನ್ನರ್ಪಾಡಿ | ನಗರ |
| | | 126 | ನವಚೇತನ ಯುವಕ ಮಂಡಲ, ಕಟ್ಟೆಗುಡ್ಡೆ | ಗ್ರಾಮಾಂತರ |
| | | 127 | ಮಹಾಲಿಂಗೇಶ್ವರ ಯುವಕ ವೃಂದ, ಆರೂರು, ಬ್ರಹ್ಮಾವರ | ಗ್ರಾಮಾಂತರ |
| | | 128 | ಅಂಬೇಡ್ಕರ್ ಯುವಕ ಮಂಡಲ, ಮೇಲ್ ಗಂಗೊಳ್ಳಿ | ಗ್ರಾಮಾಂತರ |
| | | 129 | ಸಮೃದ್ಧಿ ಯುವಕ ಮಂಡಳ, ಕುಳ್ಳುಂಜೆ | ಗ್ರಾಮಾಂತರ |
| | | 130 | ಚೈತನ್ಯ ಯುವಕ ಮಂಡಳ, ನೀಲಾವರ | ಗ್ರಾಮಾಂತರ |
| | | **ಬೆಳಗಾವಿ ವಿಭಾಗ** | | |
| 17 | **ಬೆಳಗಾವಿ** | 131 | ರಾಹುಲ ಕತ್ತಿ ಯುವಕ ಮಂಡಳ, ಮದಿಹಳ್ಳಿ, ಹುಕ್ಕೇರಿ ತಾಲೂಕು | ಗ್ರಾಮಾಂತರ |
| | | 132 | ಶ್ರೀ ವಾಲ್ಮೀಕಿ (ನಾಯಕ) ಯುವಕ ಸಂಘ, ಗೋಟೂರ, ಹುಕ್ಕೇರಿ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 133 | ಜೈ ಶ್ರೀರಾಮ ಯುವಕ ಮಂಡಳ,<br>ಇನಾಮಹೊಂಗಲ, ಸವದತ್ತಿ ತಾಲೂಕು | ಗ್ರಾಮಾಂತರ |
| | | 134 | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ<br>ಸಂಘ, ಹೊರಟ್ಟಿ, ಸವದತ್ತಿ ತಾಲೂಕು | ಗ್ರಾಮಾಂತರ |
| | | 135 | ಶ್ರಿ ವಾಲ್ಮೀಕಿ ಯುವಕ ಮಂಡಳ,<br>ಹಣಬರಹಟ್ಟಿ, ಬೈಲಹೊಂಗಲ ತಾಲೂಕು | ಗ್ರಾಮಾಂತರ |
| | | 136 | ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾ ಮತ್ತು<br>ಸಾಂಸ್ಕೃತಿಕ ಯುವಕ ಸಂಘ<br>ಮೇಕಲಮರಡಿ, ಬೈಲಹೊಂಗಲ ತಾಲೂಕು | ಗ್ರಾಮಾಂತರ |
| | | 137 | ಶ್ರೀ ಮಹರ್ಷಿ ವಾಲ್ಮೀಕಿ ಯುವಕ ಸಂಘ<br>ಲಾಲ ಬಹದ್ದೂರ ಶಾಸ್ತ್ರಿ, ನಗರ, ಕಂಗ್ರಾಳಿ,<br>ಬೆಳಗಾವಿ ತಾಲೂಕು | ಗ್ರಾಮಾಂತರ |
| 18 | **ವಿಜಯಪುರ** | 138 | ಡಾ. ಬಿ.ಆರ್ ಅಂಬೇಡ್ಕರ್ ಯುವಕರ ಸಂಘ,<br>ಹಡಗಲಿ, ವಿಜಯಪುರ ತಾಲೂಕು | ಗ್ರಾಮಾಂತರ |
| 19 | **ಧಾರವಾಡ** | 139 | ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಸಂಘ<br>ಸಾಸ್ವಿಹಳ್ಳಿ, ಅಣ್ಣಿಗೇರಿ ತಾಲೂಕು | ಗ್ರಾಮಾಂತರ |
| | | 140 | ಗ್ರಾಮದೇವಿ ಕ್ರೀಡಾ ಮತ್ತು ಸಾಂಸ್ಕೃತಿಕ<br>ಯುವಕ ಮಂಡಳ<br>ಗಳಗಿಹೊಲಕೊಪ್ಪ, ಕಲಘಟಗಿ | ಗ್ರಾಮಾಂತರ |
| | | 141 | ಶ್ರೀ ವೀರಭದ್ರೇಶ್ವರ ರೋಲರ್ ಸ್ಕೇಟಿಂಗ್ ಮತ್ತು<br>ಸ್ಪೋರ್ಟ್ಸ್ ಅಕಾಡೆಮಿ<br>ನವನಗರ, ಹುಬ್ಬಳ್ಳಿ | ಗ್ರಾಮಾಂತರ |
| | | 142 | ಶ್ರೀ ಬಸವೇಶ್ವರ ಯುವ ಸಂಘ, ಗೌಡಗೇರಿ,<br>ಕುಂದಗೋಳ | ಗ್ರಾಮಾಂತರ |
| | | 143 | ನೆಹರು ಕ್ರೀಡಾ ಅಕಾಡೆಮಿ, ಶಿರಗುಪ್ಪಿ, ಹುಬ್ಬಳ್ಳಿ<br>ತಾಲೂಕು | ಗ್ರಾಮಾಂತರ |
| | | 144 | ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಸಂಘ,<br>ಭಂಡಿವಾಡ, ಹುಬ್ಬಳ್ಳಿ ತಾಲೂಕು | ಗ್ರಾಮಾಂತರ |
| | | 145 | ಅಷ್ಟ ವಿನಾಯಕ ಯುವಕ ಮಂಡಳ,<br>ಕುಸುಗಲ್, ಹುಬ್ಬಳ್ಳಿ ತಾಲೂಕು | ಗ್ರಾಮಾಂತರ |
| | | 146 | ವಿವೇಕಾನಂದ ಸ್ಪೋರ್ಟ್ಸ್ ಮತ್ತು ಕಲ್ಚರಲ್<br>ಅಸೋಸಿಯೇಷನ್<br>ಹುಬ್ಬಳ್ಳಿ, ಹುಬ್ಬಳ್ಳಿ ತಾಲೂಕು | ನಗರ |
| | | 147 | ವೀರಾಂಜನೇಯ ಯುವ ಸಾಂಸ್ಕೃತಿಕ ಕಲಾ<br>ಬಳಗ ಮುರಾರ್ಜಿನಗರ, ಹುಬ್ಬಳ್ಳಿ, ಹುಬ್ಬಳ್ಳಿ<br>ತಾಲೂಕು | ನಗರ |
| | | 148 | ಆದರ್ಶ ಯುವಕ ಮಂಡಳ, ಹಿರೇಹರಕುಣಿ,<br>ಕುಂದಗೋಳ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 149 | ವೀರೇಶ್ವರ ಯುವಕ ಸಂಘ, ರಟ್ಟಿಗೇರಿ,<br>ಕುಂದಗೋಳ ತಾಲೂಕು | ಗ್ರಾಮಾಂತರ |
| | | 150 | ಜೈ ಕರ್ನಾಟಕ ರಿಕ್ರೀಯೇಶನ್ ಕ್ಲಬ್,<br>ಕುಂದಗೋಳ, ಕುಂದಗೋಳ ತಾಲೂಕು | ನಗರ |
| | | 151 | ಸಂಜೀವಿನಿ ಫೌಂಡೇಶನ್, ಸಾಧನಕೇರಿ,<br>ಧಾರವಾಡ ತಾಲೂಕು | ನಗರ |
| | | 152 | ವಾಲ್ಮೀಕಿ ಸಾಂಸ್ಕೃತಿಕ ಹಾಗೂ ಕ್ರೀಡಾ ಯುವ ಸಂಘ<br>ಯಾದವಾಡ, ಧಾರವಾಡ ತಾಲೂಕು | ಗ್ರಾಮಾಂತರ |
| | | 153 | ಬಸವೇಶ್ವರ ಯುವಕ ಮಂಡಳ,<br>ಮಲಕನಕೊಪ್ಪ, ಕಲಘಟಗಿ ತಾಲೂಕು | ಗ್ರಾಮಾಂತರ |
| 20 | **ಗದಗ** | 154 | ಶ್ರೀ ಬಸವೇಶ್ವರ ಯುವಕ ಸಂಘ<br>ಬಟ್ಟೂರು, ಶಿರಹಟ್ಟಿ ತಾಲೂಕು | ಗ್ರಾಮಾಂತರ |
| | | 155 | ಶ್ರೀ ಕಲ್ಮೇಶ್ವರ ಯುವಕ ಮಂಡಳ<br>ಚುರ್ಚಿಹಾಳ, ಮುಂಡರಗಿ ತಾಲೂಕು | ಗ್ರಾಮಾಂತರ |
| 21 | **ಉತ್ತರ ಕನ್ನಡ** | 156 | ಮಹಾತ್ಮಗಾಂಧಿ ಯುವಕ ಮಂಡಳ<br>ಚೆಂಡಿಯಾ, ಕಾರವಾರ ತಾಲೂಕು | ಗ್ರಾಮಾಂತರ |
| | | 157 | ಶ್ರೀ ಸಿದ್ಧಿ ವಿನಾಯಕ ಯುವಕ ಸಂಘ<br>ನದಿಬಾಗ, ಅಂಕೋಲಾ ತಾಲೂಕು | ನಗರ |
| | | 158 | ವಿಜಯ ಯುವಕ ಸಂಘ (ರಿ)<br>ಬೋಗ್ರಿಬೈಲ್, ಕುಮುಟ ತಾಲೂಕು | ಗ್ರಾಮಾಂತರ |
| | | 159 | ಶ್ರೀ ಭೈರವೇಶ್ವರ ಯುವಕ ಸಂಘ (ರಿ)<br>ಹೊದ್ಕೆ ಶಿರೂರು, ಹೊನ್ನಾವರ ತಾಲೂಕು | ಗ್ರಾಮಾಂತರ |
| | | 160 | ನೇತಾಜಿ ಯುವಕ ಮಂಡಳ<br>ಕರಿಕಲ್ಲ, ಭಟ್ಕಳ ತಾಲೂಕು | ಗ್ರಾಮಾಂತರ |
| | | 161 | ಬಸವೇಶ್ವರ ಯುವಕ ಮಂಡಳ<br>ನರೂರ, ಶಿರಸಿ ತಾಲೂಕು | ಗ್ರಾಮಾಂತರ |
| | | 162 | ಗೆಳೆಯರ ಬಳಗ ಯುವಕ ಸಂಘ<br>ಶಿರಳಗಿ, ಸಿದ್ದಾಪುರ ತಾಲೂಕು | ಗ್ರಾಮಾಂತರ |
| | | 163 | ಶ್ರೀ ಹನುಮಾನ ಯುವಕ ಮಂಡಳ ಸಂಘ (ರಿ)<br>ಮುತ್ತಲಮುರಿ, ಹಳಿಯಾಳ ತಾಲೂಕು | ಗ್ರಾಮಾಂತರ |
| **ಕಲಬುರಗಿ ವಿಭಾಗ** | | | | |

| | | | | |
|---|---|---|---|---|
| 22 | **ಬಳ್ಳಾರಿ** | 164 | ಡಾ. ಬಿ.ಆರ್ ಅಂಬೇಡ್ಕರ್ ಸಂಘ, ತಾಳೂರ | ನಗರ |
| | | 165 | ಚಿಗುರು ಕಲಾ ತಂಡ, ಇಬ್ರಾಹಿಂಪೂರ ಗ್ರಾಮ | ಗ್ರಾಮಾಂತರ |
| | | 166 | ಸದ್ಗುರು ವೆಂಕದೂತ ವಾಲ್ಮೀಕಿ ಯುವಕ ಸಂಘ, ದಮೂರು | ಗ್ರಾಮಾಂತರ |
| | | 167 | ನೇತ್ರಾ ಕಲಾ ಸಂಘ, ಸಿರಗುಪ್ಪ | ನಗರ |
| | | 168 | ಡಾ. ಬಿ.ಆರ್ ಅಂಬೇಡ್ಕರ್ ಕ್ರೀಡಾ ಅಭಿವೃದ್ಧಿ ಸಂಸ್ಥೆ, ಕೋಟೆ, ಬಳ್ಳಾರಿ | ನಗರ |
| 23 | **ಬೀದರ್** | 169 | ಜೈ ಭೀಮ ಬ್ರಿಗೇಡ್ ಯುವಕ ಸಂಘ, ಬಾಲ್ಕಿ | ನಗರ |
| | | 170 | ಜೈ ಹೋ ಯುವಕ ಸಂಘ, ನಾವದಗೇರಿ | ನಗರ |
| | | 171 | ರೇವಣಸಿದ್ದೇಶ್ವರ ಯೂಥ್ ಕ್ಲಬ್, ಅಂಬೇಸಾಂಗವಿ, ಭಾಲ್ಕಿ | ಗ್ರಾಮಾಂತರ |
| 24 | **ಕಲಬುರಗಿ** | 172 | ಸಂತಶ್ರೀ ಸೇವಾ ಲಾಲ ಯುವಕ ಸಂಘ ಇಟಕಲ, ಸೇಡಂ ತಾಲೂಕು | ಗ್ರಾಮಾಂತರ |
| | | 173 | ಬಂಜಾರಾ ಯುವಕ ಸಂಘ ಗೋದಿಕೆರಿ ತಂಡಾ, ಸರಡಗಿ, ಕಲಬುರಗಿ ತಾಲೂಕು | ಗ್ರಾಮಾಂತರ |
| | | 174 | ಶ್ರೀ ರಾಮಲಿಂಗೇಶ್ವರ ನವಯುವಕರ ಸಂಘ ಚಿಂಚೋಳಿ, ಕಲಬುರಗಿ ತಾಲೂಕು | ಗ್ರಾಮಾಂತರ |
| | | 175 | ಡಾ\|\| ಬಿ.ಆರ್. ಅಂಬೇಡ್ಕರ್ ಯುವಕ ಸಂಘ, ಚಿತ್ತಾಪುರ ತಾಲೂಕು | ಗ್ರಾಮಾಂತರ |
| | | 176 | ಮದಕರಿ ನಾಯಕ ಯುವಕ ಸಂಘ, ಚಿತ್ತಾಪುರ ತಾಲೂಕು | ಗ್ರಾಮಾಂತರ |
| | | 177 | ರಾಮಜಿ ಯುವಕ ಸಂಘ, ಕಡಗಂಚಿ, ಆಳಂದ ತಾಲೂಕು | ಗ್ರಾಮಾಂತರ |
| | | 178 | ಹನುಮಾನ ಯುವಕ ಸಂಘ, ಆಳಂದ ತಾಲೂಕು | ಗ್ರಾಮಾಂತರ |
| | | 179 | ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಯುವಕ ಸಂಘ, ಜೇವರ್ಗಿ ತಾಲೂಕು | ಗ್ರಾಮಾಂತರ |
| 25 | **ಕೊಪ್ಪಳ** | 180 | ಶ್ರೀ ರಾಧಾಕೃಷ್ಣನ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮತ್ತು ಕಲ್ಯಾಣ ಸಂಸ್ಥೆ ಹಾಗೂ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಘ ಚಿಕ್ಕಮ್ಯಾಗೇರಿ, ಯಲಬುರ್ಗಾ ತಾಲೂಕು | ಗ್ರಾಮಾಂತರ |
| | | 181 | ಶ್ರೀಸ್ವಾಮಿ ವಿವೇಕಾನಂದ ಕ್ರೀಡಾ ಹಾಗೂ ಸಂಸ್ಕೃತಿ ಯುವಕ ಸಂಘ ನವಲಿ, ಗಂಗಾವತಿ ತಾಲೂಕು | ಗ್ರಾಮಾಂತರ |

| | | | | |
|---|---|---|---|---|
| | | 182 | ಶ್ರೀ ಮಹರ್ಷಿ ವಾಲ್ಮೀಕಿ ಕ್ರೀಡೆ, ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಯುವಕ ಸಂಘ ಬುಡಕುಂಟಿ, ಯಲಬುರ್ಗಾ ತಾಲೂಕು | ಗ್ರಾಮಾಂತರ |
| 26 | **ರಾಯಚೂರು** | 183 | ಸ್ವಾಮಿ ವಿವೇಕಾನಂದ ಯುವಶಕ್ತಿ ಯುವಕ ಸಂಘ ಆರೋಲಿ<br>ಆರೋಲಿ, ಮಾನ್ವಿ ತಾಲೂಕು | ಗ್ರಾಮಾಂತರ |
| | | 184 | ಡಾ. ಬಿ.ಆರ್ ಅಂಬೇಡ್ಕರ್ ಯುವಕ ಸಂಘ, ಕಲ್ಲೂರು | ನಗರ |
| | | 185 | ಅಖಿಲ ಕರ್ನಾಟಕ ವಡ್ಡರ ಯುವಕ ಸಂಘ, ಲಿಂಗಸಗೂರು ತಾಲೂಕು | ಗ್ರಾಮಾಂತರ |
| | | 186 | ಶ್ರೀ ಗುರು ಪಂ. ಪುಟ್ಟರಾಜ ಸಾಂಸ್ಕೃತಿಕ ಜಾನಪದ ಕಲಾ ಯುವಕ ಸಂಘ, ಸಿಂದನೂರು ತಾಲೂಕು | ನಗರ |
| 27 | **ವಿಜಯನಗರ** | 187 | ನಯನ ಸಂಗೀತಾ ಕಲಾ ಸಂಸ್ಥೆ<br>ಮೋರಿಗೇರಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು | ಗ್ರಾಮಾಂತರ |
| | | 188 | ಶ್ರೀ ನರಸಿಂಹ ಸ್ವಾಮಿ ಯುವಕ ಮಂಡಳಿ<br>ನರಸಿಂಗಿರಿ ಗ್ರಾಮ, ಕೂಡ್ಲಿಗಿ ತಾಲೂಕು | ಗ್ರಾಮಾಂತರ |
| | | 189 | ಶ್ರೀ ಐಶ್ವರ್ಯ ಯುವಶಕ್ತಿ ಸಂಘ<br>ವಾಂಡ್ಲಿಂಕಟ್ಟೆ, ಸಂಡೂರು ತಾಲೂಕು | ನಗರ |
| | | 190 | ವಿಜಯನಗರ ಯುವಕ ಬಳಗ<br>ಹೊಸಪೇಟೆ ತಾಲೂಕು | ನಗರ |
| | | 191 | ಶ್ರೀ ಕೃಷ್ಣ ಯುವಶಕ್ತಿ ಸಂಘ<br>ಮೆಟ್ರಿ, ಸಂಡೂರು ತಾಲೂಕು | ನಗರ |
| | | 192 | ಶ್ರೀ ಸಿದ್ದರಾಮೇಶ್ವರ ಕಲಾ ಸಾಂಸ್ಕೃತಿಕ ಸಂಘ, ಹಂಪಿ | ನಗರ |
| 28 | **ಯಾದಗಿರಿ** | 193 | ಬಂಜಾರ ಸಮಾಜಸೇವಾ ಯುವಕ ಸಂಘ<br>ಮುದ್ನಾಳ, ಯಾದಗಿರಿ ತಾಲೂಕು | ಗ್ರಾಮಾಂತರ |
| | | 194 | ಏಕಲವ್ಯ ಯುವಕ ಸಂಘ<br>ದೇವಾಪುರ, ಸುರಪುರ ತಾಲೂಕು | ಗ್ರಾಮಾಂತರ |

# ಅನುಬಂಧ-5

| ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕಳೆದ ಐದು ವರ್ಷಗಳಲ್ಲಿ ಮಾನ್ಯತೆ ಪಡೆದ ರಾಜ್ಯ ಕ್ರೀಡಾಸಂಸ್ಥೆಗಳಿಗೆ ನೀಡಿರುವ ಅನುದಾನದ ವಿವರ | | | | | | |
|---|---|---|---|---|---|---|
| ಪಟ್ಟಿ - ಅ | | | | | | |
| (ರೂಗಳಲ್ಲಿ) | | | | | | |
| ಕ್ರ ಸ | ಕ್ರೀಡಾಸಂಸ್ಥೆಯಹೆಸರು | 2020-21 | 2021-22 | 2022-23 | 2023-24 | 2024-25 |
| 1 | ಕರ್ನಾಟಕ ಅರ್ಚರಿ ಸಂಸ್ಥೆ ,ಬೆಂಗಳೂರು | 0 | 0 | 0 | 0 | 60,00,000 |
| 2 | ಕರ್ನಾಟಕ ಅಥ್ಲೆಟಿಕ್ ಸಂಸ್ಥೆ,ಬೆಂಗಳೂರು | 8,26,903 | 2,37,322 | 1,00,375 | 12,30,128 | 66,32,405 |
| 3 | ಕರ್ನಾಟಕ ಆಟ್ಯ ಪಾಟ್ಯ ಸಂಸ್ಥೆ, ಬೆಳಗಾವಿ | 0 | 30,000 | 0 | 0 | 10,83,680 |
| 4 | ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ,ಬೆಂಗಳೂರು | 0 | 0 | 0 | 25,00,000 | 40,00,000 |
| 5 | ಕರ್ನಾಟಕ ರಾಜ್ಯ ಬಾಸ್ಕೆಟ್ ಬಾಲ್ ಸಂಸ್ಥೆ , ಬೆಂಗಳೂರು | 0 | 1,73,070 | 0 | 11,15,085 | 92,75,700 |
| 6 | ಕರ್ನಾಟಕ ಕೇರಂ ಸಂಸ್ಥೆ ,ಬೆಂಗಳೂರು | 0 | 0 | 0 | 40,468 | 0 |
| 7 | ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ,ಬಾಗಲಕೋಟೆ | 4,68,208 | 3,58,003 | 0 | 0 | 21,40,915 |
| 8 | ಕರ್ನಾಟಕ ಕ್ರೀಡಾ ಫೆಡರೇಷನ್ ಆಫ್ ದಿ ಢೆಫ್ ಸಂಸ್ಥೆ, ತುಮಕೂರು | 0 | 0 | 0 | 0 | 30,000 |
| 9 | ಕರ್ನಾಟಕ ಫೆನ್ಸಿಂಗ್ ಸಂಸ್ಥೆ ,ಬೆಂಗಳೂರು | 0 | 4,66,180 | 5,56,650 | 5,39,440 | 43,05,901 |
| 10 | ಕರ್ನಾಟಕ ಫುಟ್‌ಬಾಲ್ ಸಂಸ್ಥೆ , ಬೆಂಗಳೂರು | 0 | 0 | 0 | 0 | 50,00,000 |
| 11 | ಕರ್ನಾಟಕ ಹ್ಯಾಂಡ್ ಬಾಲ್ ಸಂಸ್ಥೆ , ಬೆಂಗಳೂರು | 0 | 0 | 0 | 13,17,463 | 12,50,000 |
| 12 | ಹಾಕಿ ಕರ್ನಾಟಕ, ಬೆಂಗಳೂರು | 5,00,000 | 0 | 0 | 0 | 70,00,000 |
| 13 | ಕರ್ನಾಟಕ ಜೂಡೋ ಸಂಸ್ಥೆ ,ಬೆಂಗಳೂರು | 1,86,135 | 0 | 0 | 0 | 12,50,000 |
| 14 | ಕಯಾಕಿಂಗ್ ಅಂಡ್ ಕ್ಯಾನೋಯಿಂಗ್ ಅಸೋಸಿಯೇಟ್ಸ್ ,ಬೆಂಗಳೂರು | 0 | 0 | 2,40,504 | 0 | 74,02,824 |
| 15 | ಕರ್ನಾಟಕ ಅಮೆಚೂರ್ ಖೊ-ಖೊ ಸಂಸ್ಥೆ ,ಬೆಂಗಳೂರು | 0 | 0 | 0 | 0 | 10,00,000 |
| 16 | ಕರ್ನಾಟಕಲಾನ್ ಟೆನ್ನಿಸ್ ಸಂಸ್ಥೆ, ಬೆಂಗಳೂರು | 0 | 1,00,00,000 | 0 | 0 | 50,00,000 |
| 17 | ಕರ್ನಾಟಕ ನೆಟ್‌ಬಾಲ್ ಸಂಸ್ಥೆ , ಬೆಂಗಳೂರು | 0 | 0 | 0 | 0 | 25,00,000 |
| 18 | ಕರ್ನಾಟಕ ರಾಜ್ಯ ಅಂಗವಿಕಲರ ಸಂಸ್ಥೆ , ಬೆಂಗಳೂರು | 12,50,000 | 0 | 0 | 0 | 0 |

| | | | | | | |
|---|---|---|---|---|---|---|
| 19 | ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿಸಂಸ್ಥೆ ,ಬೆಂಗಳೂರು | 0 | 0 | 0 | 0 | 25,00,000 |
| 20 | ಕರ್ನಾಟಕ ಒಲಂಪಿಕ್ ಸಂಸ್ಥೆ | 7,25,000 | 6,50,000 | 3,06,18,000 | 7,50,000 | 6,35,50,000 |
| 21 | ಕರ್ನಾಟಕ ರೈಫಲ್ ಶೂಟಿಂಗ್ ಸಂಸ್ಥೆ ,ಬೆಂಗಳೂರು | 0 | 0 | 0 | 0 | 1,50,00,000 |
| 22 | ಕರ್ನಾಟಕ ಟೆಕ್ವೊಂಡೋ ಸಂಸ್ಥೆ, ಬೆಂಗಳೂರು | 0 | 0 | 0 | 0 | 25,00,000 |
| 23 | ಕರ್ನಾಟಕ ಸೆಪಕ್ ಟೆಕ್ರಾ ,ದಾವಣಗೆರೆ | 0 | 2,46,768 | 1,89,600 | 3,73,054 | 3,98,540 |
| 24 | ಕರ್ನಾಟಕ ಈಜು ಸಂಸ್ಥೆ ,ಬೆಂಗಳೂರು | 0 | 20,00,000 | 55,00,000 | 1,00,00,000 | 1,00,00,000 |
| 25 | ಕರ್ನಾಟಕ ಟೇಬಲ್ ಟೆನ್ನಿಸ್ ಸಂಸ್ಥೆ, ಧಾರವಾಡ | 0 | 0 | 0 | 0 | 30,00,000 |
| 26 | ಕರ್ನಾಟಕ ಟೆನಿಕಾಯ್ಟ್ ಸಂಸ್ಥೆ ,ಬೆಂಗಳೂರು | 0 | 0 | 1,47,396 | 2,24,196 | 2,69,702 |
| 27 | ಕರ್ನಾಟಕ ಟೆನ್ನಿಸ್‌ಬಾಲ್ ಕ್ರಿಕೆಟ್ ಸಂಸ್ಥೆ ,ಬೆಂಗಳೂರು | 1,55,880 | 3,63,344 | 2,71,520 | 2,41,040 | 7,78,727 |
| 28 | ಕರ್ನಾಟಕ ಟಗ್ ಆಫ್ ವಾರ್ ಸಂಸ್ಥೆ ,ಬೆಂಗಳೂರು | 3,62,780 | 3,90,924 | 0 | 5,88,894 | 13,17,427 |
| 29 | ಕರ್ನಾಟಕ ರಾಜ್ಯ ವೈಟ್ ಲಿಫ್ಟಿಂಗ್ ಸಂಸ್ಥೆ, ಬೆಂಗಳೂರು | 0 | 0 | 0 | 1,50,000 | 35,00,000 |
| 30 | ಕರ್ನಾಟಕ ಬಾಕ್ಸಿಂಗ್ಸ್ ಸಂಸ್ಥೆ, ಬೆಂಗಳೂರು | 0 | 0 | 0 | 0 | 25,00,000 |
| 31 | ಜಿಮ್ನಾಸ್ಟ್ ಅಸೋಸಿಯೇಷನ್ ಆಫ್ ಕರ್ನಾಟಕ, ಬೆಂಗಳೂರು | 0 | 0 | 0 | 0 | 17,50,000 |
| 32 | ಕರ್ನಾಟಕ ಅಮೆಚೂರ್ ಶೂಟಿಂಗ್‌ಬಾಲ್ ಸಂಸ್ಥೆ | 1,62,360 | 4,52,219 | 0 | 1,19,568 | 4,31,082 |
| 33 | ಕರ್ನಾಟಕ ವುಶು ಸಂಸ್ಥೆ ಬಾಗಲಕೋಟೆ | 0 | 1,55,870 | 0 | 0 | 25,00,000 |
| | **ಒಟ್ಟು** | **46,37,266** | **1,55,23,700** | **3,76,24,045** | **1,91,89,336** | **17,38,66,903** |

**ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಕಳೆದ ಐದು ವರ್ಷಗಳಲ್ಲಿ ಇತರೆ ಕ್ರೀಡಾಸಂಘ/ಕ್ಲಬ್‌ಗಳಿಗೆ ನೀಡಿರುವ ಅನುದಾನದ ವಿವರ**

**ಪಟ್ಟಿ-ಆ**

**(ರೂ. ಗಳಲ್ಲಿ)**

| **ಕ್ರ ಸ** | **ಕ್ರೀಡಾಸಂಸ್ಥೆಯಹೆಸರು** | **2020-21** | **2021-22** | **2022-23** | **2023-24** | **2024-25** |
|---|---|---|---|---|---|---|
| 1 | ಮಂಡ್ಯ ಜಿಲ್ಲಾ ಫುಟ್ಬಾಲ್ ಸಂಸ್ಥೆ ,ಮಂಡ್ಯ | 15,00,000 | 0.00 | 0.00 | 0.00 | 0.00 |
| 2 | ಕರ್ನಾಟಕ ಬಾಕ್ಸಿಂಗ್ ಸಂಸ್ಥೆ .ಬೆಂಗಳೂರು | 5,00,000 | 0.00 | 0.00 | 0.00 | 0.00 |

| | | | | | | |
|---|---|---|---|---|---|---|
| 3 | ಲಕ್ಷ್ಮೀಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 2,00,000 | 0.00 | 0.00 | 0.00 | 0.00 |
| 4 | ಡಾ|| ಕಾರಂತ ಹುಟ್ಟೂರು ಪ್ರಶಸ್ತಿ ಪ್ರತಿಷ್ಠಾನ (ರಿ) ಕೋಟ ,ದಕ್ಷಿಣಕನ್ನಡ | 10,00,000 | 0.00 | 0.00 | 0.00 | 0.00 |
| 5 | ಮೋಟಾರ್ ಸ್ಪೋರ್ಟ್ಸ್ ಅಕಾಡೆಮಿ ಆಫ್ ವಿಜಯನಗರ, ಹಂಪಿ | 5,00,000 | 10,00,000 | 5,00,000 | | 5,00,000 |
| 6 | ಕುಲ್ಲೇಟರ್ ಹಾಕಿ ಫೆಸ್ಟ್ 2018, ಕೊಡಗು | 25,00,000 | 0.00 | 0.00 | 0.00 | 0.00 |
| 7 | ಆಳ್ವಾಸ್ ಎಜುಕೇಷನ್ ಫೆಡರೇಷನ್ ,ದಕ್ಷಿಣಕನ್ನಡ | 0.00 | 2,00,000 | 0.00 | 0.00 | 0.00 |
| 8 | ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್ , ಬೆಂಗಳೂರು | 0.00 | 35,000 | 1,00,00,000 | 0.00 | 0.00 |
| 9 | ಅಖಿಲ ಭಾರತ ಮಂಡಲ ಯುವವೇದಿಕೆ , | 0.00 | 1,00,000 | 0.00 | 0.00 | 0.00 |
| 10 | ಪ್ಯಾರಾಲಿಂಪಿಕ್ ಕಮಿಟಿ ಆಫ್ ಇಂಡಿಯ, ಬೆಂಗಳೂರು | 0.00 | 30,00,000 | 0.00 | 0.00 | 0.00 |
| 11 | ಉಡುಪಿ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ಸ್ ಅಸೋಸಿಯೇಷನ್ ,ಉಡುಪಿ | 0.00 | 5,00,000 | 0.00 | 0.00 | 0.00 |
| 12 | ಪ್ಯಾರಾಲಿಂಪಿಕ್ ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾ, ಬೆಂಗಳೂರು | 0.00 | 5,00,000 | 0.00 | 0.00 | 0.00 |
| 13 | ಆಳ್ವಾಸ್ ಎಜುಕೇಷನ್ ಫೌಂಡೇಷನ್ ,ದಕ್ಷಿಣಕನ್ನಡ | 0.00 | 50,00,000 | 0.00 | 0.00 | 0.00 |
| 14 | ಕೆಲ್ಲೇಟಿರ ಹಾಕಿ ಫೆಸ್ಟ್ -2018, ಮಡಿಕೇರಿ | 0.00 | 15,00,000 | 0.00 | 0.00 | 0.00 |
| 15 | ಶ್ರೀಸಿದ್ದಿ ಮಹಾಗಣಪತಿ ಮಾರುತಿ ವ್ಯಾಯಾಮಶಾಲೆ, ಬೆಂಗಳೂರು | 0.00 | 1,00,000 | 0.00 | 0.00 | 0.00 |
| 16 | ಕಾಯಕಯೋಗಿ ಫೌಂಡೇಷನ್ ಮಂಡ್ಯ | 0.00 | 0.00 | 1,00,000 | 0.00 | 0.00 |
| 17 | ಮೆಟ್ರೋ ಫ್ಲೆಕ್ಸ್ ಹೈ ಟೆಕ್ ಮಲ್ಟಿ ಜಿಮ್ ,ಬೆಂಗಳೂರು | 0.00 | 0.00 | 12,50,000 | 12,50,000 | 0.00 |
| 18 | ಅಗ್ರಾಂ ರೈಡಿಂಗ್ ಅಂಡ್‌ಪೋಲೋ ಅಕಾಡೆಮಿ, ಬೆಂಗಳೂರು | 0.00 | 0.00 | 5,00,000 | 0.00 | 0.00 |
| 19 | ಕರ್ನಾಟಕ ಟೆನ್ನಿಸ್ ವಾಲಿಬಾಲ್ ಸಂಸ್ಥೆ ,ಬೆಂಗಳೂರು | 0.00 | 0.00 | 10,00,000 | 0.00 | 5,00,000 |
| 20 | ಕಾಲೇಜ್ ಬೆಟರ್ ಮೆಂಟ್ ಫಂಡ್ ( ಸರ್ಕಾರಿ ಪ್ರಥಮ ದರ್ಜೆಕಾಲೇಜು, ಉಡುಪಿ) | 0.00 | 0.00 | 3,00,000 | 0.00 | 0.00 |
| 21 | ಕೊಡವ ಗೌಡ ಯುವವೇದಿಕೆ, ಮಡಿಕೇರಿ | 0.00 | 0.00 | 2,00,000 | 0.00 | 0.00 |
| 22 | ಇಂಟರ್‌ನ್ಯಾಷನಲ್ ಕಲ್ಚರಲ್ ಸ್ಕೌಟ್ಸ್ ಅಂಡ್ ಗೈಡ್ ಜಂಬೂರಿ , ದಕ್ಷಿಣ ಕನ್ನಡ | 0.00 | 0.00 | 25,00,000 | 0.00 | 0.00 |
| 23 | ಒಕ್ಕಲಿಗರ ಯುವವೇದಿಕೆ ,ಮಡಿಕೇರಿ | 0.00 | 0.00 | 0.00 | 7,00,000 | 0.00 |
| 24 | ವಿ.ಆರ್.ಎಲ್. ಮೀಡಿಯ, ,ಬೆಂಗಳೂರು | 0.00 | 0.00 | 0.00 | 2,50,000 | 0.00 |

| | | | | | | |
|---|---|---|---|---|---|---|
| 25 | ಬೆಳಗಾವಿ ರಾಜ್ಯ ಖೊ-ಖೋ ಅಸೋಸಿಯೇಷನ್ | 0.00 | 0.00 | 0.00 | 10,000 | 0.00 |
| 26 | ಕೋಟಿ ಚೆನ್ನಯ್ಯ ಜೋಡುಕೆರೆ ಕಂಬಳ ಸಮಿತಿ, ದಕ್ಷಿಣ ಕನ್ನಡ | 0.00 | 0.00 | 0.00 | 5,00,000 | 0.00 |
| 27 | ಅಖಿಲ ಅಮ್ಮಕೊಡವ ಸಮಾಜ, ಮಡಿಕೇರಿ | 0.00 | 0.00 | 0.00 | 5,00,000 | 0.00 |
| 28 | 12ನೇ ಅಖಿಲ ಭಾರತ ಪೊಲೀಸ್ ಆರ್ಚರಿ ಪಂದ್ಯಾವಳಿ ,ಬೆಂಗಳೂರು | 0.00 | 0.00 | 0.00 | 20,00,000 | 0.00 |
| 29 | ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಚೆಸ್ ಅಸೋಸಿಯೇಷನ್ ,ಬೆಂಗಳೂರು | 0.00 | 0.00 | 0.00 | 30,00,000 | 0.00 |
| 30 | ಯೆಮ್ಮೆಕೆರೆ ಸ್ವಿಮ್ಮಿಂಗ್ ಪೂಲ್ ಕಮಿಟಿ, ದಕ್ಷಿಣ ಕನ್ನಡ | 0.00 | 0.00 | 0.00 | 15,00,000 | 0.00 |
| 31 | ಕರ್ನಾಟಕ ಫಿಲಂ ಕ್ರಿಕಟ್ ಸಂಸ್ಥೆ ,ಬೆಂಗಳೂರು | 0.00 | 0.00 | 0.00 | 1,00,00,000 | 1,00,00,0 00 |
| 32 | ಬೆಂಗಳೂರು ಕಂಬಳ ಸಮಿತಿ | 0.00 | 0.00 | 0.00 | 50,00,000 | 0.00 |
| 33 | ಕನಕ ಬಾಸ್ಕೆಟ್ಬಾಲ್ ಅಸೊಸಿಯೇಷನ್ ಕ್ಲಬ್, ಕೋಲಾರ | 0.00 | 0.00 | 0.00 | 0.00 | 10,00,000 |
| 34 | ಕುಂದ್ಯಲ್ಕಂಡ ಹಾಕಿ ಕಾರ್ನಿವಲ್ ,ಮಡಿಕೇರಿ | 0.00 | 0.00 | 0.00 | 0.00 | 1,00,00,0 00 |
| 35 | ಎನ್ ಇ ಬಿ ಸ್ಪೋರ್ಟ್ಸ್ ,ಬೆಂಗಳೂರು | 0.00 | 0.00 | 0.00 | 10,00,000 | 10,00,000 |
| 36 | ಸೆಲ್ಫ್ ಡಿಫೆನ್ಸ್ ಸ್ಕೂಲ್ ಆಫ್ ಇಂಡಿಯನ್ ಕರಾಟೆ ಮಂಗಳೂರು ಡೊಜೋ, ಮಂಗಳೂರು | 0.00 | 0.00 | 0.00 | 0.00 | 25,00,000 |
| 37 | ತಪಸ್ಯ ಫೌಂಡೇಷನ್ ಮಂಗಳೂರು | 0.00 | 0.00 | 0.00 | 0.00 | 50,00,000 |
| | **ಒಟ್ಟು** | **62,00,000** | **1,19,35,000** | **1,63,50,000** | **2,57,10,000** | **3,05,00,0 00** |